# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೨ | ನೋಂದಣಿ ಸಂಖ್ಯೆ : KARBIL / 2005 / 16123 | ಡಿಸೆಂಬರ್ - 2013 | ಸಂಚಿಕೆ ೧೨


**ಶ್ರೀ ಸುಬ್ರಹ್ಮಣ್ಯ ಸಭಾದ ಮುಂದಿನ ಕಾರ್ಯಕ್ರಮಗಳು**
**ತಾರೀಕು 15-12-2013ರಂದು ವಾರ್ಷಿಕೋತ್ಸವ, ತಾರೀಕು 19-01-2014ರಂದು ಕಿರು ಪ್ರವಾಸ**

# ಮಂಗಳದ ಈ ಸುದಿನ... ಮಧುರವಾಗಲಿ

*ವರದಿ : ಶ್ರೀ ಪಿ. ಶ್ರೀಕಾಂತ್ ರಾವ್, ಮಂಗಳೂರು*

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 12-11-2013ರಂದು ವೈಭವದ ದೀಪಾವಳಿಯನ್ನು ಆಚರಿಸಲಾಯಿತು. ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣದ ಬಳಿಕ ಶ್ರೀ ಸಭಾದ ಹಿರಿಯ ಸದಸ್ಯರು ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅನಂತರ ನಡೆದ ಧಾರ್ಮಿಕ ಉಪನ್ಯಾಸದಲ್ಲಿ ಶ್ರೀ ಸಂಜಯಕುಮಾರ್ ಪಲಿಮಾರುರವರು ದೀಪಾವಳಿ ಆಚರಣೆಯ ಮಹತ್ವ, ಧಾರ್ಮಿಕ ಹಿನ್ನೆಲೆ ಹಾಗೂ ಆಚರಣೆಯ ಬಗ್ಗೆ ವಿವರವಾಗಿ ತಿಳಿಸಿದರು. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾದ ವಿನೋದಾತ್ಮಕ ಆಟಗಳು ಮಕ್ಕಳ ವಿಭಾಗ, ಮಹಿಳಾ ವಿಭಾಗ, ದಂಪತಿ ವಿಭಾಗಗಳಲ್ಲಿ ನಡೆದಾಗ ಸ್ಪರ್ಧಿಗಳು ಅತ್ಯುತ್ಸಾಹದಲ್ಲಿ ಭಾಗವಹಿಸಿದರು ಮತ್ತು ಸಭಿಕರು ಸಿಳ್ಳೆ, ಕೂಗು, ಕರತಾಡನಗಳ ಮೂಲಕ ಪ್ರೋತ್ಸಾಹಿಸಿದರು. ಸಾಂಪ್ರದಾಯಿಕ ಉಡುಗೆ ಸ್ಪರ್ಧೆಯು ಪೈಪೋಟಿಯಲ್ಲಿ ನಡೆದು ಶ್ರೀ ನಾಗರಾಜ ಶರ್ಮ, ಕುಮಾರಿ ನಂದಿತ, ಪುಟಾಣಿ ಯಶಿಕ ವಿಜೇತರಾದರು. ತೀರ್ಪುಗಾರರಾಗಿ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಮಂಜುಳಾ ಮುರಳೀಧರ ಸಹಕರಿಸಿದರು.

ಅನಂತರ ದಾಂಡಿಯಾ ನೃತ್ಯ, ಸಾಮೂಹಿಕ ನೃತ್ಯಗಳು ನಡೆದು ಹಿರಿಯರು ಕಿರಿಯರು ಹಾಡಿಗೆ ತಕ್ಕಂತೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಸದಸ್ಯರು ಮನೆಯಲ್ಲೇ ತಯಾರಿಸಿ ತಂದ ರುಚಿ ರುಚಿ ವ್ಯಂಜನಗಳಾದ ಮೂಡೆ, ಶ್ಯಾವಿಗೆ, ಚಪಾತಿ, ಕೂರ್ಮ, ಸಾಂಬಾರ್, ಚಟ್ನಿ, ಕಾಯಿಹುಳಿ, ಕಾಯಿಹಾಲುಗಳು ಹೊಟ್ಟೆ ಸಂತೈಸಿದರೆ, ಐಸ್‌ಕ್ರೀಮ್ ಹೊಟ್ಟೆ ತಂಪಾಗಿಸಿ ನೃತ್ಯ, ಆಟಗಳು ಮನಸ್ಸನ್ನು ಮುದಗೊಳಿಸಿದವು. ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಕುಸುಮ ನವೀನ್‌ರವರ ಅಡುಗೆ ವ್ಯವಸ್ಥೆಗಳಿಗೆ ಮಹಿಳಾ ಸದಸ್ಯರು ಅತ್ಯುತ್ತಮ ಸಹಕಾರ ನೀಡಿದರು. ಯುವ ವೇದಿಕೆಯ ಶ್ರೀ ವಿದ್ಯಾರಣ್ಯ, ಶ್ರೀ ನಾಗರಾಜ್ ವರ್ಕಾಡಿ ಮತ್ತು ಶ್ರೀ ಸುರೇಶ್ ಕಡಬ ಕಾರ್ಯಕ್ರಮ ಸಂಯೋಜಿಸಿ ನಿರ್ವಹಿಸಿದರು.






*ಚಿತ್ರ : ರಘುವೀರ್ ಪೆರ್ಡೂರ್*

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

**ಸಮಾಜ ಬಾಂಧವರೇ,**

### ಶ್ರೀ ಸಭಾದ ವಾರ್ಷಿಕೋತ್ಸವವು

**ತಾರೀಕು 15-12-2013 ಆದಿತ್ಯವಾರದಂದು**

**ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.**

**ಅಧ್ಯಕ್ಷರು** ಮತ್ತು ***ಸರ್ವ ಸದಸ್ಯರು***

**ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :**

| ವಿದ್ಯಾರಣ್ಯ ಕೆ. | ಶ್ರೀಮತಿ ಶೈಲಜಾ ಶ್ರೀಕಾಂತ್ | ಶ್ರೀಮತಿ ಅರುಣಾ ಸೋಮಶೇಖರ್ |
|---|---|---|
| 9686201277, | 9341446255, 2495929(R) | 9880413243, 2452860(R) |

*ವಿ. ಸೂ. : ಸ್ಪರ್ಧೆಗಳಲ್ಲಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಲು ವಿನಂತಿಸುತ್ತೇವೆ.*

**ಕಾರ್ಯಕ್ರಮಗಳು**

ಪೂರ್ವಾಹ್ನ ಗಂಟೆ 9-00 : **ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ**
ಪೂರ್ವಾಹ್ನ ಗಂಟೆ 9-30 : **ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಪ್ರಾರಂಭ**
ಪೂರ್ವಾಹ್ನ ಗಂಟೆ 10-00 : **ಬೇಯಿಸದ ಅಡುಗೆ ಸ್ಪರ್ಧೆ – ಮುಕ್ತ ವಿಭಾಗ (ಬೆಂಕಿಯ ಸಹಾಯವಿಲ್ಲದೆ)**
10-00ರಿಂದ 10-30 : **ಆಶು ಭಾಷಣ ಸ್ಪರ್ಧೆ ಮುಕ್ತ ವಿಭಾಗ**
***(ವಿಭಾಗ : 16 ವರ್ಷದ ಒಳಗಿನವರಿಗೆ, 16 ವರ್ಷದಿಂದ ಮೇಲ್ಪಟ್ಟವರಿಗೆ)***
10-30ರಿಂದ 11-00 : **ಜಾನಪದ ಗೀತೆ / ಭಾವಗೀತೆ ಸ್ಪರ್ಧೆ**
ಪೂರ್ವಾಹ್ನ ಗಂಟೆ 11-00 : **ಮಹಾಸಭೆ**
ಅಪರಾಹ್ನ ಗಂಟೆ 12-30 : **ಶ್ರೀ ಸತ್ಯನಾರಾಯಣ ಪೂಜಾ ಮಂಗಳಾರತಿ**
ಅಪರಾಹ್ನ ಗಂಟೆ 1-00 : **ಭೋಜನ**
ಅಪರಾಹ್ನ ಗಂಟೆ 2-00 : **ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಬಹುಮಾನ ವಿತರಣೆ**

**Please : log on to www.subramanyasabha.com for Jnanashakthi Monthly, Event Photos, Address of Sthanikas and latest Informations.**

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


## ಚುಟುಕುಗಳು

ಅಕ್ಷಯದ ಆಗರ
ಚೈತನ್ಯದ ಸಾಗರ
ನೀತಿ ನಿಯಮದ ಭಂಡಾರ
ಅದುವೇ ಗೀತಾಮೃತದ ಸಾರ

*****

ದುಷ್ಟರ ಸಂಗ ಅಭಿಮಾನ ಭಂಗ
ಅಚಲ ವಾರಿಧಿ ತುಂಗ
ಪರಮ ಪಾವನೆ ಗಂಗಾ
ಜಳಕ ಮಾಡಿದ ಉತ್ತುಂಗ

*****

ಗಿಡದಲಿ ಮಲ್ಲಿಗೆ ತುಂಬಿ
ಮೆಲ್ಲಗೆ ಬಂತು ದುಂಬಿ
ದುಂಬಿಯು ಹೀರಿತು ಗಂಧವನು
ಇಟ್ಟರು ಪೂಜೆಗೆ ಪುಷ್ಪವನು

**ರಚನೆ : ವತ್ಸಲಾ ಯೋಗೀಶ್ ರಾವ್, ಏಳಿಂಜೆ**

## ಬಂದೆಯ ಬಾಳಿನ ಬೆಳಕಾಗಿ

ಮಂಗಳೂರಿನ ಶ್ರೀ ಪ್ರದೀಪ್ ರಾವ್ ಹಾಗೂ ಶ್ರೀಮತಿ ಕವಿತಾರವರಿಗೆ ತಾರೀಕು 18-11-2013ರಂದು ಗಂಡು ಮಗುವಿನ ಜನನ.

## ಸ್ವಾಗತವು ಹೊಸ ವರುಷಕೆ

ಜೀವನವೆಂಬ ಹಾದಿಯಲಿ ಮತ್ತೊಂದು ವಸಂತವ ಕಳೆದು,
ಕ್ರಮಿಸಿದ ಹಾದಿಯಲಿ ಅನುಭವಿಸಿದ ಸುಂದರ ಕ್ಷಣಗಳ ಸವಿದು,
ಬಾಳೆಂಬ ಪಯಣದಲಿ ಏರು ತಗ್ಗುಗಳನು ದಾಟಿ,
ಬಂದಿಹುದು ಹೊಸವರುಷ ಹೊಸ ಹುರುಪನು ಮೀಟಿ
ಸ್ವಾಗತವು ನಿಮಗೆ ಹೊಸ ವರುಷಕೆ ಸುಸ್ವಾಗತವು.

ಕಂಗಳಲಿ ತುಂಬಿಹ ಸುಂದರ ನಾಳೆಯ ಕನಸುಗಳ ಕಂಡು,
ಎದೆಯಾಳದಲಿ ಮೂಡಿದ ಮಧುರ ಭಾವನೆಗಳ ಉಂಡು,
ಜೀವನದ ಸುಖ-ದುಃಖಗಳ ಮಿಶ್ರಫಲವನ್ನು ದಾಟಿ,
ಬಂದಿಹುದು ಹೊಸ ವರುಷ ಹೊಸ ಹುರುಪನು ಮೀಟಿ
ಸ್ವಾಗತವು ನಿಮಗೆ ಹೊಸ ವರುಷಕೆ ಸುಸ್ವಾಗತವು.

ಬದುಕೆಂಬ ಗಾಡಿಯಲಿ ಜೊತೆಗೂಡಿದವರೆಷ್ಟೋ, ಅಗಲಿದವರೆಷ್ಟೋ,
ಜೀವನದ ಜಂಜಾಟದಲಿ ನಾವು ಮಾಡಿದ ಪಾಪವೆಷ್ಟೋ, ಪುಣ್ಯವೆಷ್ಟೋ,
ಬಾಳಿನ ಪಥದಲ್ಲಿ ನೋವು-ನಲಿವು, ಸರಿ-ತಪ್ಪುಗಳನು ದಾಟಿ,
ಬಂದಿಹುದು ಹೊಸವರುಷ ಹೊಸ ಹುರುಪನು ಮೀಟಿ
ಸ್ವಾಗತವು ನಿಮಗೆ ಹೊಸ ವರುಷಕೆ ಸುಸ್ವಾಗತವು.

ಬನ್ನಿರಿ ಸಮಸ್ತ ಸಮಾಜ ಬಾಂಧವರೆಲ್ಲರೂ ಒಂದಾಗಿ,
ಹೊಸ ವರುಷದೆಡೆಗಿನ ನಮ್ಮ ಪಯಣದ ಸಹ ಪ್ರಯಣಿಗರಾಗಿ,
ಬಡವ-ಬಲ್ಲಿದ, ಮೇಲು-ಕೀಳುಗಳೆಂಬ ದುರ್ಭಾವನೆಗಳು ದಾಟಿ,
ಬೇಡುವ ನಾವು ಸುಖ ಶಾಂತಿ, ಸಮೃದ್ಧಿ ಕಾರ್ತಿಕೇಯನ ಹೃದಯ ಮೀಟಿ,
ಬಂದಿಹುದು ಹೊಸ ವರುಷ ಹೊಸ ಸದ್ಭಾವನೆಗಳ ಮೂಡಿಸಿ
ಸ್ವಾಗತವು ನಿಮಗೆ ಹೊಸ ವರುಷಕೆ ಸುಸ್ವಾಗತವು.

**ಶ್ರೀಮತಿ ಮಂಜುಳಾ ಮುರಳೀಧರ್ ರಾವ್, ಮಂಗಳೂರು**


The RIGHT Place for the Customer
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

*Sri Hari Adyapady*
*Proprietor*

Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex
Church Building, Main Road
BAJPE, MANGALORE


ಪತ್ರಿಕೆಗೆ ಶುಭ ಬಯಸುವ–

**ಶ್ರೀ ಯು. ನವೀನ ಕುಮಾರ್ ಮತ್ತು**
**ಶ್ರೀಮತಿ ಕುಸುಮ ನವೀನ ಕುಮಾರ್**
**ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್**
**ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್**

**PRAVEEN KUMAR ADYAPADY**
**ADVOCATE**
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
**We undertakes:** Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTER**
*Dealers in : Computers Hardware and Peripherals*
*Computer Sales & Services*

*Alvares Centre, N.H. 17, Nanthoor, Mangalore - 575 005*

**ರಾಮಾ ಆಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702
**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**


**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
**Wholesale & Retail Dealers in**
**2 & 3 WHEELERS SPARES & ACCESSORIES**
**Prop. :** [illegible]

## ಅಂತಾರಾಷ್ಟ್ರೀಯ ಖ್ಯಾತಿಯ ಕ್ವಿಲ್ಟ್ ಕಲಾವಿದೆ

# ನಂದಿಕೂರು ಶ್ಯಾಮಲಾ ಅರವಿಂದ ರಾವ್

**Blog Address : http://banyantreequilts.wordpress.com**


MAHABATMAQBARA

ಬಟ್ಟೆಯ ಮೇಲೆ ಮೂರು ಪದರಗಳಲ್ಲಿ ಒಂದು ವಿಶಿಷ್ಟ ಕಲಾಕೃತಿಯನ್ನು ಅರಳಿಸುವುದು ಕ್ವಿಲ್ಟ್ (QUILT) ಎಂಬ ಸಾಂಪ್ರದಾಯಿಕ ಕಲೆ. ಈ ಕಲಾಪ್ರಕಾರದಲ್ಲಿ ಪ್ರಥಮ ಪದರವು ಒಟ್ಟು ಕಲಾಕೃತಿಯನ್ನು ಅಳವಡಿಸಲು ಸಹಕರಿಸುವ ಅಪೇಕ್ಷಿತ ಆಕಾರಕ್ಕೆ ಕತ್ತರಿಸಿದ ಒಂದು ಬಟ್ಟೆಯ ತುಂಡಾಗಿರುತ್ತದೆ. ಎರಡನೇ ಪದರವು ಹತ್ತಿಯ ಯಾ ಸ್ಪಾಂಜ್ (Sponge)ನ್ನು ಅಳವಡಿಸಿ ರಚಿಸಿದ ಕಲೆಯನ್ನು ಅರಳಿಸಲು ಬೇಕಾದ ರಂಗಸಜ್ಜಿಕೆಯಾಗಿರುತ್ತದೆ. ಕೊನೆಗೆ ಮೇಲ್ಪದರವು ಕತ್ತರಿಸಿದ (pieced) ಅಥವಾ ತೇಪೆಗಳನ್ನು (patch) ಕ್ರಮಬದ್ಧವಾಗಿ ಜೋಡಿಸಿ ರಚಿಸಿದ ಅಥವಾ ಬಟ್ಟೆಯನ್ನು ವಿವಿಧ ವಿನ್ಯಾಸಗಳಿಂದ ರಚಿಸಿ ಜೋಡಿಸಿದ ಆಯಾ ಕಲಾವಿದನ ಕಲ್ಪನೆಯಲ್ಲಿ ಅರಳುವ ಒಂದು ಕಲಾಕೃತಿಯಾಗಿರುತ್ತದೆ.

ಭಾರತೀಯ ಇತಿಹಾಸದಲ್ಲಿ ಶತಮಾನಗಳಿಂದ ಈ ಕಲೆಯು ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಜನೋಪಯೋಗಿ ಉದ್ಯಮ ಹಾಗೂ ಕಲೆಯಾಗಿ ಬೆಳೆದು ಬಂದಿರುತ್ತದೆ. ಹಳೆಯ ಸೀರೆಗಳನ್ನು ಹಾಗೂ ನಿರುಪಯೋಗಿ ಬಟ್ಟೆಯ ಚೂರುಗಳನ್ನು ಸುಂದರವಾಗಿ ಜೋಡಿಸಿ ಚಾದರ, ಹೊದಿಕೆಗಳನ್ನು ತಯಾರಿಸುತ್ತಿದ್ದರು. ಇವುಗಳನ್ನು ಚಳಿಗಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹೊದೆಯಲು, ಹಾಸಲು ಉಪಯೋಗಿಸುತ್ತಿದ್ದರು. ಉತ್ತರ ಭಾರತದಲ್ಲಿ ಇಂತಹ ಕುಸುರಿ ಕೆಲಸದಲ್ಲಿ ತಯಾರಿಸಿದ ಕಲೋತ್ಪನ್ನಗಳನ್ನು ರಜಾಯಿ (Razai) ಎಂದೂ ಉತ್ತರ ಕರ್ನಾಟಕದಲ್ಲಿ ಗೊಡ್ಡಾಡಿ (Godadi) ಎಂದು ಕರೆಯಲಾಗುತ್ತಿತ್ತು.

### ಕ್ವಿಲ್ಟ್ ಒಂದು ಕಲೆಯಾಗಿ :

ವಿದೇಶಗಳಲ್ಲಿ ಕ್ವಿಲ್ಟ್ ಒಂದು ಕಲೆಯಾಗಿ ಮನೆಗಳ ಗೋಡೆಗಳಲ್ಲಿ, ಹಜಾರಗಳಲ್ಲಿ, ಶಯ್ಯಾಗೃಹಗಳಲ್ಲಿ ಒಂದು ಆಲಂಕಾರಿಕ ಕಲಾಕೃತಿಯಾಗಿ ಪ್ರದರ್ಶಿಸಲ್ಪಡುತ್ತದೆ – ಉಪಯೋಗಿಸಲ್ಪಡುತ್ತದೆ. ಚಿತ್ರ ಕಲಾವಿದರು ಬಣ್ಣಗಳು, ಬ್ರಷ್, ಕ್ಯಾನ್‌ವಾಸ್‌ನ್ನು ಉಪಯೋಗಿಸಿದಂತೆ ಕ್ವಿಲ್ಟ್ ಕಲಾವಿದರು ಬಟ್ಟೆ, ನೂಲು, ಹೊಲಿಗೆ ಯಂತ್ರಗಳ ಸಹಾಯದಿಂದ ಕಲಾಕೃತಿಯನ್ನು ನಿರ್ಮಿಸುತ್ತಾರೆ. ಬಳಿಕ ಫ್ಯಾಬ್ರಿಕ್‌ಬಣ್ಣಗಳು, ಕಸೂತಿ ಕೆಲಸಗಳಿಂದ ಆ ಕಲಾಕೃತಿಯನ್ನು ಇನ್ನಷ್ಟು ಆಕರ್ಷಕವಾಗಿಸುತ್ತಾರೆ.


### ಕ್ವಿಲ್ಟ್‌ನೊಂದಿಗೆ ಪಯಣ :

ಬಾಲ್ಯದಲ್ಲಿ ಬೊಂಬೆಗಳನ್ನು ಬಹುವಾಗಿ ಪ್ರೀತಿಸುತ್ತಿದ್ದ ಶ್ಯಾಮಲಾ ಅವರು ಅವುಗಳೊಂದಿಗೆ ಆಟವಾಡುತ್ತಿದ್ದರು. ಬೊಂಬೆಗಳಿಗೆ ಬಗೆ ಬಗೆಯ ಉಡುಗೆ–ತೊಡುಗೆಗಳನ್ನು ಅವರೇ ಹೊಲಿದು ತೊಡಿಸಿ, ಸಿಂಗರಿಸುತ್ತಿದ್ದರು. ಸಂಭ್ರಮಿಸುತ್ತಿದ್ದರು. ಮುಂದೆ ಅವರು ಬೆಂಗಳೂರಿನ ಆಚಾರ್ಯ ಚಿತ್ರಕಲಾ ಪರಿಷತ್ತಿನ ವಿದ್ಯಾರ್ಥಿಯಾಗಿ ತನ್ನ ಗೊಂಬೆ ಸಂಸಾರಕ್ಕೆ ವಸ್ತ್ರವಿನ್ಯಾಸವನ್ನು ಮಾಡುತ್ತಾ ಹೊಸ ಹೊಸ ಪೋಷಾಕುಗಳನ್ನು ತೊಡಿಸಿ ಸಂಭ್ರಮಿಸುತ್ತಿದ್ದರು. ಮುಂದೆ ತನ್ನ ವಿವಾಹವಾದ ಬಳಿಕ ತನ್ನ ಈ ಹವ್ಯಾಸವನ್ನು ಒಂದಷ್ಟು ಮಾರ್ಪಡಿಸಿ ತನ್ನ ಮಕ್ಕಳಿಗೆ ಉಡುಗೆಗಳನ್ನು ಹೊಲಿಯುವ, ಮನೆಗೆ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದನ್ನು ಮುಂದುವರಿಸಿದರು. ಹೀಗೆ ಅವರ ಮಕ್ಕಳಾಟ ಮುಂದೆ ಹವ್ಯಾಸವಾಗಿ, ಕಲೆಯಾಗಿ, ಈಗ ಕ್ವಿಲ್ಟ್ ಕಲೆಯಾಗಿ ಮುಂದುವರಿಯುತ್ತಿದೆ.

### ವಿದೇಶಗಳಲ್ಲಿ ರಾವ್ ಅವರ ಕ್ವಿಲ್ಟ್ :

ಕ್ವಿಲ್ಟ್ ಬಗ್ಗೆ ಮಾಹಿತಿ ಶಿಬಿರಗಳನ್ನು ನಡೆಸುತ್ತಿರುವ ಶ್ಯಾಮಲಾ ರಾವ್ ಅವರು ಕುವೈಟ್ ಟೆಕ್ಸ್‌ಟೈಲ್ ಅಸೋಸಿಯೇಶನ್‌ನ ಸದಸ್ಯೆ, ಕೆ.ಟಿ.ಎ.ಎ. ಎಂಬ ಕ್ವಿಲ್ಟ್ ತಂಡದ ಸ್ಥಾಪಕ ಸದಸ್ಯೆ, ಅದೇ ಸಂಸ್ಥೆಯ ಫೈಬರ್ ಆರ್ಟ್ಸ್ ಗ್ರೂಪ್‌ನ ಸದಸ್ಯೆ ಮತ್ತು ಅದರ ನ್ಯೂಸ್‌ಲೆಟರ್‌ನ ಸಂಪಾದಕಿ ಹಾಗೂ ಅದೇ ಸಂಸ್ಥೆಯ ವಿವಿಧ ಜವಾಬ್ದಾರಿಗಳನ್ನು ಹಂತ ಹಂತವಾಗಿ ನಿರ್ವಹಣೆ, ಅವರ ವಿಶಿಷ್ಟ ಕಲಾಕೃತಿ **'ಮುಬಾರಕ್ ಕುವೈಟ್'** ಮುಂತಾದ ಹಲವು ಕೃತಿಗಳು ಬರ್ಮಿಂಗ್‌ಹ್ಯಾಮ್ ಇಂಗ್ಲೆಂಡ್‌ನ ಕ್ವಿಲ್ಟ್ ಫೆಸ್ಟಿವಲ್‌ನಲ್ಲಿ ಕುವೈಟ್‌ನಲ್ಲಿ, ದುಬೈಯಲ್ಲಿ, ಹೋಸ್ಟನ್, ಯು.ಎಸ್.ಎ.ಯಲ್ಲಿ ಹೀಗೆ ವಿವಿಧ ದೇಶಗಳಲ್ಲಿ, ವಿವಿಧ ಖಂಡಗಳಲ್ಲಿ ಪ್ರದರ್ಶಿಸಲ್ಪಟ್ಟಿವೆ ಮತ್ತು ಪ್ರಶಸ್ತಿಯನ್ನೂ ಗಳಿಸಿವೆ.

ಇವರ ಪತಿ ಡಾ। ನಂದಿಕೂರು ಅರವಿಂದ ರಾವ್ ಅವರು ಕುವೈಟ್ ಸರಕಾರದ ಆರೋಗ್ಯ ಇಲಾಖೆಯ ಅಧೀನದಲ್ಲಿರುವ ಸಭಾ ಹಾಸ್ಪಿಟಲ್ (Sabah Hospital)ನಲ್ಲಿ ಬಯೋ–ಕೆಮಿಸ್ಟ್ರಿ ವಿಭಾಗದಲ್ಲಿ (bio-chemistry) ಸಲಹೆಗಾರರಾಗಿ (consultant) ಆಗಿದ್ದು ಮೂಲತಃ ಉಡುಪಿ ಜಿಲ್ಲೆಯ ನಂದಿಕೂರಿನವರಾಗಿರುತ್ತಾರೆ. ಅವರ ಪ್ರಥಮ ಪುತ್ರ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದ ಯುನಿವರ್ಸಿಟಿ ಆಫ್ ವಾಷಿಂಗ್‌ಟನ್‌ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ (Asst. Professor) ಆಗಿರುವ ಅನೂಪ್ ರಾವ್ ಅವರು ಪ್ರಕಟಿಸಿದ ಸಂಶೋಧನಾ ಪ್ರಬಂಧಗಳು ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದು ಅಮೇರಿಕಾದ ಶ್ರೇಷ್ಠ ನೂರು ಯುವವಿಜ್ಞಾನಿಗಳಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟಿದ್ದಾರೆ. ದ್ವಿತೀಯ ಪುತ್ರ ಅವಿನಾಶ್‌ನು BLACK ROCK ಎಂಬ ಹಣಕಾಸು ನಿರ್ವಹಣಾ ಸಂಸ್ಥೆಯಲ್ಲಿ ಆಡಳಿತ ನಿರ್ದೇಶಕ (Director) ಆಗಿದ್ದು ಉನ್ನತ ಉದ್ಯೋಗದಲ್ಲಿದ್ದಾನೆ. ಹೀಗೆ ಒಂದು ಸುಂದರ ಕಲಾಕೃತಿಯಂತೆ ತನ್ನ ಸಂಸಾರವನ್ನು ಸಹ ರೂಪಿಸಿರುವ ಶ್ಯಾಮಲಾ ರಾವ್ ಅವರಿಗೆ **'ಜ್ಞಾನಶಕ್ತಿ'** ಶುಭವನ್ನು ಹಾರೈಸುತ್ತದೆ.


WAQANKI AND THE BUTTERFLY | MABROOK! KUWAIT | CONE FLOWER GARDEN | JAMAL - 2013 | MITTU' THE MACAW.J | ZINNIA | 'CONTAINED' FPP 2013

## ಚಿಣ್ಣರ ಆರ್ಟ್ ಗ್ಯಾಲರಿ


ಚಿತ್ರ 1



ಚಿತ್ರ 2



ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.



**ಅನುಜ್ಞಾರಾವ್,** L.K.G.
*ಶ್ರೀದೇವಿ ನರ್ಸರಿ ಸ್ಕೂಲ್ ಕಿನ್ನಿಗೋಳಿ*



**ಕೃಪಾಲ**
*5ನೇ ತರಗತಿ*
*ಎಸ್. ಆರ್. ಪಬ್ಲಿಕ್ ಸ್ಕೂಲ್, ಹೆಬ್ರಿ*

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ : ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**



## 'ನಮ್ಮ ಕಲಾವಿದರು'



### ಶ್ರೀ ರಾಜೇಂದ್ರ ಕೇದಿಗೆ

ಶ್ರೀ ಕೇದಿಗೆ ಭಾಸ್ಕರ ರಾವ್ ಮತ್ತು ಶ್ರೀಮತಿ ಲಕ್ಷ್ಮಿಯ ಪುತ್ರ ಮಂಗಳೂರಿನ ನಿವಾಸಿ ಶ್ರೀ ರಾಜೇಂದ್ರ ಕೇದಿಗೆ. ವೃತ್ತಿಯಲ್ಲಿ ಚಿತ್ರ ಕಲಾವಿದ, ಕನ್ನಡ ತುಳು ಚುಟುಕು ಕವನ, ಕಾವ್ಯ ಬರೆಯುವ ಹವ್ಯಾಸವನ್ನು ಹೊಂದಿದ್ದಾರೆ. ಕರಾವಳಿ ಚಿತ್ರಕಲಾ ಚಾವಡಿ (ರಿ.), ಮಂಗಳೂರು ಇದರ ಸಂಘಟನಾ ಕಾರ್ಯದರ್ಶಿಯಾಗಿ (2010, 2011, 2012) ಇದೀಗ ಕಾರ್ಯದರ್ಶಿಯಾಗಿಯೂ, ಅಲ್ಲದೇ ಒಂದು ನಿಗದಿತ ಅವಧಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇದರ ದ. ಕ. ಜಿಲ್ಲಾ ಗೌರವ ಸಂಚಾಲಕರಾಗಿ ದುಡಿದ ಅನುಭವಿ ಹಾಗೂ ಆರ್ಟಿಸ್ಟ್ ಫೋರಂ (ರಿ.) ಉಡುಪಿಯ ಸದಸ್ಯರೂ ಆಗಿರುತ್ತಾರೆ.

ಮಂಗಳೂರು ತಾಲೂಕು ಚುಟುಕು ಸಾಹಿತ್ಯ ಪರಿಷತ್‌ನ ಸದಸ್ಯ ಹಾಗೂ ಹಲವಾರು ಜಿಲ್ಲಾ, ರಾಜ್ಯ, ಅಂತರ್‌ರಾಜ್ಯ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಬಹರೈನ್‌ನ ಸಂಘ ಸಂಸ್ಥೆ ಕಾಂಚನಗಂಗಾ ಪ್ರತಿಷ್ಠಾನ ಹಮ್ಮಿಕೊಂಡ ಜಾಗತಿಕಮಟ್ಟದ ತುಳು ಕಾವ್ಯಸ್ಪರ್ಧೆಯಲ್ಲಿ ಇವರು ರಚಿಸಿರುವ 'ಕರಿಯಿನ ನೆಂಪುಲು' ಕಾವ್ಯಶ್ರೀ ಪ್ರಶಸ್ತಿ ಪಡೆದಿರುತ್ತದೆ.

ಕಲಾವಿದನಾಗಿ ಕಲಾಕ್ಷೇತ್ರದಲ್ಲಿ ಮಂಗಳೂರು, ಉಡುಪಿ, ಕುಂದಾಪುರ, ಬೆಂಗಳೂರು, ಬೆಳಗಾಂ, ಕೇರಳ, ಮುಂಬಯಿ, ದೆಹಲಿ ಹೀಗೆ ಹಲವಾರು ಕಡೆ ಚಿತ್ರಕಲಾ ಪ್ರದರ್ಶನ ನೀಡಿರುತ್ತಾರೆ. ಹಲವಾರು ಕಲಾಶಿಬಿರ ಹಾಗೂ ಕಲಾಮೇಳಗಳಲ್ಲಿ ಸಂಚಾಲಕನಾಗಿ ದುಡಿದಿದ್ದು, ಜಿಲ್ಲಾ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ಹಲವು ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಹಾಗೂ ಹಲವಾರು ಚಿತ್ರಕಲಾ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ (ಉದಯವಾಣಿ, ವಿಜಯಕರ್ನಾಟಕ, ಹಿಂದೂ ಪತ್ರಿಕೆ, ಕಾರ್ಪೋರೇಶನ್ ಬ್ಯಾಂಕ್, ಲಯನ್ಸ್ ಕ್ಲಬ್, ಸಾರಿಗೆ ಪ್ರಾಧಿಕಾರ ಹೀಗೆ ಹಲವು) ಭಾಗವಹಿಸಿದ್ದಾರೆ. ಮಂಗಳೂರಿನ ಇಂಡಿಯನ್ ಆಯಿಲ್ ಕಾರ್ಪೋರೇಶನ್‌ನ ಆರ್ಟ್ ಇನ್‌ಸೈಟ್ ಕಲಾಗ್ಯಾಲರಿಯಲ್ಲಿ 2009ರಿಂದ 2011ರ ತನಕ ಗ್ಯಾಲರಿ ಇನ್‌ಚಾರ್ಜ್ ಪರ್ಸನ್ ಆಗಿ ದುಡಿದ ಅನುಭವ ಹೊಂದಿದ್ದಾರೆ ಅನೇಕ ಸಂಘ ಸಂಸ್ಥೆಗಳು (ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವ ವರ್ಷದ ಆಚರಣೆಯ ಸಂದರ್ಭದಲ್ಲೂ) ಕಲಾಸೇವೆಯನ್ನು ಗುರುತಿಸಿ ಗೌರವ ಸನ್ಮಾನಗಳನ್ನು ನೀಡಿವೆ. ಹಾಗೇನೆ ಕಲಾವಿದ ಬೆಳೆಯುವಲ್ಲಿ ಕುಟುಂಬಸ್ಥರ, ಗುರುಗಳ, ಬಂಧು–ಮಿತ್ರರ ಮತ್ತು ಕಲಾಪೋಷಕರ ಪ್ರೋತ್ಸಾಹ, ಸಹಕಾರವನ್ನು ಯಾವತ್ತಿಗೂ ನೆನಪಿಸಿಕೊಳ್ಳುತ್ತಾರೆ.

"ಎಲ್ಲಕ್ಕಿಂತಲೂ ಮಿಗಿಲಾಗಿ ಹೇಳುವುದಾದರೆ ನಮ್ಮಲ್ಲಿನ ಸಹಜ ಅಭಿರುಚಿಗಳಿಗೆ ಒತ್ತುಕೊಟ್ಟಲ್ಲಿ ತಾನೇ ತಾನಾಗಿ ಅದು ಹೊರಹೊಮ್ಮುತ್ತದೆ. ಹೀಗೆ ಇವೆಲ್ಲಕ್ಕೂ ಸಾಕ್ಷಿಯಾಗಿಕೊಂಡು ಸಾತ್ವಿಕ ರೀತಿಯಲ್ಲಿ ಕಾರ್ಯನಿರ್ವಹಿಸಿದಲ್ಲಿ ಸಮತ್ವ ಏರ್ಪಟ್ಟು ಪ್ರಕೃತಿ ಮೂಲದೊಡನೆ ಸಂವಹನಗೊಂಡಂತೆ, ನಮ್ಮೊಳಗಿನ ಅನಂತತೆಗೆ ತೆರೆದುಕೊಂಡಂತೆ ಅಹಂಕಾರಾತೀತವಾಗಿ ಜೀವನವನ್ನು ಆನಂದಗೊಳಿಸಬಹುದು". ಇದು ಇವರ ಮನದ ಮಾತು.

ನಮ್ಮ ಸಮಾಜದ ಈ ಯುವಕಲಾವಿದನಿಗೆ ಶುಭ ಹಾರೈಸುತ್ತದೆ. 'ಜ್ಞಾನಶಕ್ತಿ' ಬಳಗ.

## ಪೆರ್ಡೂರು ಪ್ರಭಾಕರ ಭಂಡಿ ಜೀವಶಾಸ್ತ್ರ ಉಪನ್ಯಾಸಕರಾಗಿ ಪದೋನ್ನತಿ



ಮಣಿಪಾಲ ಪದವಿ ಪೂರ್ವ ಕಾಲೇಜಿನಲ್ಲಿ ಪದವೀಧರ ಸಹಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಪಿ. ಪ್ರಭಾಕರ ಭಂಡಿ ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಆಡಳಿತ ಮಂಡಳಿಯ ಅನುಮತಿಯಂತೆ ಅಕ್ಟೋಬರ್‌ನಿಂದ ಪದವಿಪೂರ್ವ ವಿಭಾಗದಲ್ಲಿ ಜೀವಶಾಸ್ತ್ರ ಉಪನ್ಯಾಸಕರಾಗಿ ಪದೋನ್ನತಿ ಹೊಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಹಾಗೂ ಬಿ.ಎಡ್. ಪದವೀಧರರು. ಪೆರ್ಡೂರಿನ ನಿವೃತ್ತ ಶಿಕ್ಷಕ, ಪ್ರಸ್ತುತ ಯೋಗಶಿಕ್ಷಕ ಶ್ರೀ ಪಿ. ಹರಿನಾರಾಯಣ ಭಂಡಿ ಹಾಗೂ ಕುಸುಮ ದಂಪತಿಗಳ ಪುತ್ರ. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸದಸ್ಯರೂ ಆಗಿದ್ದಾರೆ.

## ನಮ್ಮ ಪತ್ರಿಕೆಯ "ಆಜೀವ ಬೆಂಬಲಿಗರು"

ಶ್ರೀ ಸಿ. ರಾಘವೇಂದ್ರ ರಾವ್, ಚಿತ್ರಾಪುರ
ಶ್ರೀ ನಂದಳಿಕೆ ಶಶಿಕಾಂತ ರಾವ್, ಮಂಗಳೂರು
ಶ್ರೀ ಅನಿಲ್ ಎನ್., ಸುರತ್ಕಲ್
ಶ್ರೀಮತಿ ಆಶಾ ಎ., ಪಾಂಡೇಶ್ವರ
ಡಾ। ಸದಾಶಿವ ರಾವ್, ಸುಳ್ಯ
ಡಾ। ಸುಧೀರ್ ಟಿ., ಪುತ್ತೂರು
ಶ್ರೀ ಕೆ. ಕುಮಾರಸ್ವಾಮಿ, ಮೈಸೂರು
ಶ್ರೀ ಗಣೇಶ್ ಅಧಿಕಾರಿ, ಮೈಸೂರು
ಶ್ರೀ ಕೃಷ್ಣ ರಾವ್, ಮೈಸೂರು
ಶ್ರೀ ಟಿ. ಎಲ್. ರಾವ್, ಮೈಸೂರು
ಶ್ರೀ ಕೆ. ಎಲ್. ರಾವ್, ಮೈಸೂರು
ಶ್ರೀ ಪಿ. ಉಮೇಶ್ ರಾವ್, ಮುಂಬಯಿ
ಶ್ರೀ ಪಿ. ದಿವಾಕರ್ ರಾವ್, ಪೂನ
ಶ್ರೀ ಪಿ. ವಿಶಾಲಾಕ್ಷಿ ವಿ. ರಾವ್, ಬೆಂಗಳೂರು
ಶ್ರೀ ಪಿ. ನಿರಂಜನ ರಾವ್, ಪಂಜ
ಶ್ರೀ ಪಿ. ಮೋಹನ್‌ದಾಸ್ ರಾವ್, ಶ್ರೀ ಸುಬ್ರಹ್ಮಣ್ಯ ಸಭಾ
ಶ್ರೀ ಪಿ. ಪ್ರದೀಪ್ ಕುಮಾರ್, ಮುಂಬಯಿ
ಶ್ರೀ ರವಿಪ್ರಕಾಶ್ ರಾಮ್ ರಾವ್, ಉಜ್ಜೋಡಿ
ಶ್ರೀ ಕೃಷ್ಣ ರಾವ್, ಕುಂಜಾರು

## ಕಾಸರಗೋಡು ಶಿವಬ್ರಾಹ್ಮಣ ಸಭಾದ ಸಮಾವೇಶ

"ನಮ್ಮ ಜೀವನಪದ್ಧತಿಯ ಬದಲಾವಣೆಯಿಂದ ಇಂದು ನಮಗೆ ಅನೇಕ ರೋಗಗಳು ಬರುತ್ತಿವೆ. ಆದುದರಿಂದ ಹಳೆಯ ಕಾಲದ ಜೀವನ ಮತ್ತು ಆಹಾರ ಪದ್ಧತಿಗಳ ಒಳ್ಳೆಯ ಅಂಶಗಳನ್ನು ನಾವು ಹುಡುಕಿ ಆಚರಿಸಬೇಕು. ಇಂದು ವಿದ್ಯಾರ್ಥಿಗಳಿಗೆ ಅನೇಕ ಸವಲತ್ತುಗಳಿವೆ. ಇವುಗಳನ್ನು ಉಪಯೋಗಿಸಿಕೊಂಡು ನಮ್ಮ ಒಳ್ಳೆಯ ಆಚರಣೆಗಳೊಂದಿಗೆ ಬೆಳೆದರೆ ನಾಳೆ ಒಂದು ಸಂಸ್ಕಾರವಂತ ಜನಾಂಗದ ಸೃಷ್ಟಿಯಾಗುತ್ತದೆ" ಎಂದು ಕೆ. ಯಸ್. ಹೆಗ್ಡೆ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ। ಎ. ಪಿ. ಕೃಷ್ಣ ಅಭಿಪ್ರಾಯಪಟ್ಟರು. ಅವರು ಶಿವಬ್ರಾಹ್ಮಣ ಸಭಾದ ಜಿಲ್ಲಾ ಸಮಾವೇಶದಲ್ಲಿ ಶಿವಗಂಗಾ ವಾರ್ಷಿಕ ಸಂಚಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಕಾರ್ಯಕ್ರಮಗಳನ್ನು ಕೂಡ್ಲು ದೇವಸ್ಥಾನದ ಆನುವಂಶಿಕ ಮೊಕ್ತೇಸರ ಶ್ರೀ ಕೆ. ಜಿ. ಶಾನುಭಾಗ್ ಉದ್ಘಾಟಿಸಿದರು. ಕಾರ್ಕಳದ ಹಿರಿಯ ಸಾಹಿತಿ ಸಾವಿತ್ರಿ ಮನೋಹರ್ ಸಮಾರೋಪ ಭಾಷಣ ಮಾಡಿದರು. ಸಭಾದ ಅಧ್ಯಕ್ಷ ಡಾ। ಸತ್ಯನಾಥ ಅಧ್ಯಕ್ಷತೆ ವಹಿಸಿದ್ದರು.



ಸಮಾಜದಲ್ಲಿ ವಿಶಿಷ್ಟ ಸೇವೆ ಹಿರಿಯ ವೈದ್ಯರಾದ ಡಾ। ಪಿ. ವಿ. ರಾವ್ ಅವರಿಗೆ 'ಸಮಾಜರತ್ನ ಪ್ರಶಸ್ತಿ'ಯನ್ನಿತ್ತು ಗೌರವಿಸಲಾಯಿತು. ಯಕ್ಷಗಾನ ಭಾಗವತರಾದ ರವಿಶಂಕರ ಅವರಿಗೆ 'ಕಲಾ ಪ್ರತಿಭಾ ಪುರಸ್ಕಾರ'ವನ್ನು, ವಸಂತರಾಜ್ ವಿ. ಪಿ. ಯವರಿಗೆ 'ಚಿತ್ರಕಲಾ ಪ್ರಶಸ್ತಿ'ಯನ್ನು ಕುಮಾರಿ ವಿಶಾಖ ಇವರಿಗೆ 'ಲಲಿತ ಕಲಾ ಪ್ರಶಸ್ತಿ'ಯನ್ನಿತ್ತು ಗೌರವಿಸಲಾಯಿತು. ಸಮಾಜದ ಹಿರಿಯರಾದ ಶ್ರೀ ಎ. ಎಸ್. ರಾವ್, ಏರಿಕ್ಕಳ ನಾರಾಯಣ ರಾವ್, ಅಡೂರು ಲಲಿತ ಇವರನ್ನು ಗೌರವಿಸಿ ಸನ್ಮಾನಿಸಲಾಯಿತು.

ವಿದ್ಯುತ್ ಇಲಾಖೆಯಿಂದ ಸೇವಾ ಪ್ರಶಸ್ತಿ ಪುರಸ್ಕೃತರಾದ ಶ್ರೀ ಪಿ. ಸತ್ಯನಾರಾಯಣ ಅಡೂರು, ಸಾಹಿತ್ಯಪ್ರಶಸ್ತಿ ಗಳಿಸಿದ ರಂಗಕರ್ಮಿ ಉದಯಶಂಕರ ಎನ್. ಎ., ರ‍್ಯಾಂಕ್ ವಿಜೇತೆ ಕುಮಾರಿ ನವ್ಯಾ ವಿ. ಪಿ., ಡಾಕ್ಟರೇಟ್ ಪಡೆದ ಡಾ. ಶೋಭಿತಾ ಸತೀಶ್ ಅವರನ್ನು ಅಭಿನಂದಿಸಲಾಯಿತು. ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆಗಳು ನಡೆದವು. ಶ್ರೀ ಎ. ವಿ. ಶಾನುಭಾಗ್ ಪ್ರಾಯೋಜಿತ ಸಮಾಜ ಸೇವಾ ಪ್ರೋತ್ಸಾಹಕ ನಿಧಿಯನ್ನು ಶಶಾಂಕ್ (ವಿದ್ಯಾಭ್ಯಾಸ) ರಾಧಾ ಮುರಳೀಧರ್ (ಸಂಗೀತ) ಎ. ರಾಜೇಂದ್ರ (ಚಿತ್ರಕಲೆ) ಇವರಿಗೆ ನೀಡಲಾಯಿತು.

ಬೆಳಗ್ಗೆ ನಡೆದ ಮಹಾಸಭೆಯಲ್ಲಿ ಡಾ। ಸತ್ಯನಾಥ ಅಧ್ಯಕ್ಷತೆ ವಹಿಸಿದ್ದರು. ಎ. ಮನೋಹರ್ ವರದಿ ವಾಚಿಸಿದರು. ಶ್ರೀ ಶುಭಕರ ಶಾನುಭಾಗ್ ಲೆಕ್ಕಪತ್ರ ಮಂಡಿಸಿದರು. ಬಳಿಕ ಶ್ರೀ ರಾಮ್ ಎಲ್ಲಂಗಳ ಬಳಗದವರಿಂದ ಹಾಸ್ಯ ವೈವಿಧ್ಯ, ಮಹಿಳಾ ಸಂಘದ ವತಿಯಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನಡೆದವು. ಶ್ರೀಮತಿ ಸುಮಂಗಳಾ ಮನೋಹರ್, ಶ್ರೀಮತಿ ಪ್ರಭಾ ರಮೇಶ್, ಶ್ರೀಮತಿ ಮಾಲತಿ ಜಗದೀಶ್, ವಿಜಯಲಕ್ಷ್ಮಿ ಶಾನುಭಾಗ್, ಶ್ರೀ ಗಿರಿಧರ ರಾವ್ ಅಡೂರು, ಶ್ರೀ ಸುಕುಮಾರ ಆಲಂಪಾಡಿ, ಡಾ। ಶಶಿಧರ ರಾವ್ ಕಾಞಂಗಾಡ್ ಮೊದಲಾದವರು ಉಪಸ್ಥಿತರಿದ್ದರು.

### ರಾಮನಾಮದ ಮಹಿಮೆ

ರಾಮನಾಮದ ಮಹಿಮೆಯ
ಏನೆಂದು ಬಣ್ಣಿಸಲಿ
ಸರ್ವ ಪರಿತಾಪಗಳ ಪರಿಹರಿಸಿ
ಶಾಂತಿ ನೆಮ್ಮದಿ ನೀಡುವ ಕಲ್ಪವಲ್ಲಿ
ವೀರ ಹನುಮನ ಆರಾಧ್ಯದೈವ ಶ್ರೀರಾಮ
ಭಕ್ತಜನ ಮಂದಾರ
ಕರುಣಾಸಾಗರ, ಪಿತಾವಾಕ್ಯ ಪರಿಪಾಲಕ
ಸದ್ಗುಣ ಭರಿತ ಅಸಮಾನ್ಯ ಚರಿತ
ಪತಿತಪಾವನ ಶ್ರೀ ರಾಮಚಂದ್ರ.

### ಸನ್ಯಾಸಿ

ಕಾವಿ ತೊಟ್ಟವರೆಲ್ಲಾ ಸನ್ಯಾಸಿಗಳಲ್ಲ
ವೇದಶಾಸ್ತ್ರಗಳ ಕಲಿತವರೆಲ್ಲಾ
ಯತಿಪುಂಗವರಲ್ಲಿ
ಕಾಮ, ಕ್ರೋಧ, ಲೋಭ, ಮೋಹಗಳೆಲ್ಲವ
ತ್ಯಜಿಸಿದವನೇ ನಿಜವಾದ ಸನ್ಯಾಸಿ
ಹೀನಗುಣಗಳ ಬಿಡದೆ ಹಲವರು
ಬರೀ ಡಂಭಾಚಾರದ ಮಾತುಗಳನ್ನಾಡಿ
ಸನ್ಯಾಸತ್ವಕ್ಕೆ ಬಳಿಯುವರು ಕಪ್ಪುಮಸಿ.

– ಹೆಚ್. ವಸಂತ ಕುಮಾರ್, ಕಾವೂರು

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ ಹಾಗೂ**
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

# ನಮ್ಮ ಪತ್ರಿಕೆಯ ಮಹಾಪೋಷಕರಾಗಿರುವ ಶ್ರೀ ಎಂ. ಆರ್. ವಾಸುದೇವ

ಜ್ಞಾನಶಕ್ತಿ ಮಾಸಪತ್ರಿಕೆಯ ಮಹಾಪೋಷಕರಾಗಿರುವ ಶ್ರೀ ಎಂ. ಆರ್. ವಾಸುದೇವ ಇವರು ಎಳವೆಯಿಂದಲೆ ಕಠಿಣ ಪರಿಶ್ರಮ, ಶಿಸ್ತು, ಪ್ರಾಮಾಣಿಕೆಗಳಿಂದ ಉನ್ನತ ಸ್ಥಾನಕ್ಕೇರಿದವರು. ದೇಶಾದ್ಯಂತ ಸೇವೆಸಲ್ಲಿಸಿ ಮಂಗಳೂರಿನ ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರಾಗಿ ನೇಮಕ ಗೊಂಡರು. ಇವರು ಅಧಿಕಾರ ವಹಿಸಿದ ಕೆಲವೇ ದಿನಗಳಲ್ಲಿ ಮಂಗಳೂರಿನ ವಿಮಾನ ನಿಲ್ದಾಣವು ಕ್ಷಿಪ್ರಗತಿಯ ಅಭಿವೃದ್ಧಿಯನ್ನು ಕಾಣತೊಡಗಿತು. ತಮ್ಮ ಯೋಜನಾಬದ್ಧ ಕಾರ್ಯಗಳಿಂದ ಹಲವಾರು ಕಾಲ ನನೆಗುದಿಗೆ ಬಿದ್ದಿದ್ದ ಎರಡನೇ ರನ್‌ವೇಯ ನಿರ್ಮಾಣವನ್ನು ಸ್ಥಳೀಯ ಸಹಕಾರದಿಂದ ನೆರವೇರಿಸಿದರು. ದೇವಸ್ಥಾನ, ಮಂದಿರ, ಮಸೀದಿಗಳ ಸ್ಥಳಾಂತರ, ಸಿಬ್ಬಂದಿಗಳಿಗೆ ಕಾಲೋನಿ ನಿರ್ಮಾಣ, ನೂತನ ಟರ್ಮಿನಲ್ ನಿರ್ಮಾಣ, ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟ ಹಲವಾರು ಅಭಿವೃದ್ಧಿ ಕಾರ್ಯಗಳು ಇವರ ಮುಂದಾಳತ್ವದಲ್ಲಿ ನಡೆದು ಜನಪ್ರತಿನಿಧಿಗಳ, ಜನರ ಮೆಚ್ಚುಗೆಗೆ ಪಾತ್ರವಾಯಿತು. ಮಂಗಳೂರಿನ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.



ಇವರ ಈ ಅಭಿವೃದ್ಧಿ ಕಾರ್ಯಕ್ರಮಗಳು ಸನ್ಮಾನ, ಬಿರುದುಗಳು ಇವರನ್ನು ಹುಡುಕಿಕೊಂಡು ಬರುವಂತೆ ಮಾಡಿದವು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಅಪ್ರತಿಮ ಆಡಳಿತಗಾರ, ರಚನಾಪ್ರಶಸ್ತಿ, ಅಬುದಾಬಿ ದುಬೈ ಕನ್ನಡ ಸಂಘಗಳ ಪ್ರಶಸ್ತಿ ಹಾಗೂ ಲಯನ್ಸ್, ರೋಟರಿಯಂಥ ಹಲವಾರು ಸಂಘ-ಸಂಸ್ಥೆಗಳ ಬಿರುದು, ಸನ್ಮಾನಕ್ಕೆ ಪಾತ್ರರಾದರು. ಇಷ್ಟಾದರೂ ಹಮ್ಮು ಬಿಗುಮಾನಗಳು ಇವರ ಹತ್ತಿರ ಸುಳಿಯಲಿಲ್ಲ, ಆಬಾಲ ವೃದ್ಧ, ಬಡವ ಬಲ್ಲಿದರಲ್ಲಿ ಇವರ ಮಾತುಗಾರಿಕೆಯಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲ. ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷರಾಗಿ ನಿವೃತ್ತಗೊಂಡ ಬಳಿಕ ಪ್ರಸ್ತುತ ಶ್ರೀನಿವಾಸ ಕಾಲೇಜಿನ ನಿರ್ದೇಶಕ(ಆಡಳಿತ)ರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಹಲವಾರು ಜವಾಬ್ದಾರಿಗಳನ್ನು ಹೊಂದಿದ್ದಾರೆ. ಸಂಗೀತ ಪರಿಷತ್ತು, ಎಮ್.ಎಮ್.ಎ., ಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾಗಿ, ಮಣಿರತ್ನ ಸಂಗೀತ ಆಕಾಡಮಿ ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷರಾಗಿ, ಭಾರತೀಯ ವಿದ್ಯಾ ಭವನದ ಕಾರ್ಯದರ್ಶಿಯಾಗಿ, 'ನಮ್ಮವರು' ಸಂಘದ ಪೋಷಕರಾಗಿ ಹಾಗೂ ನಮ್ಮ ಸಮಾಜದ ಹಲವು ದೇವಸ್ಥಾನಗಳ ಜೀರ್ಣೋದ್ಧಾರ ಸಮಿತಿಗಳ ಅಧ್ಯಕ್ಷರಾಗಿ ನವೀಕರಣ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

**'ಜ್ಞಾನ-ಶಕ್ತಿ' ಹಾರೈಕೆ :** ನಮಗೆ ಅಚ್ಚರಿ ಎನಿಸುವಂತೆ ಸ್ವಯಂಸ್ಫೂರ್ತಿಯಿಂದಲೇ ನಮ್ಮ ಪತ್ರಿಕೆಗೆ ಆಜೀವ ಪೋಷಕರಾಗಲು ಮುಂದೆ ಬಂದು ಇತರರಿಗೆ ಮಾದರಿಯಾದರು. ಅಷ್ಟೇ ಅಲ್ಲದೆ ತಮ್ಮ ಅತ್ಯುತ್ತಮ ಶ್ರೇಣಿಯ ಕವನಗಳು ಯಾವುದೇ ರಾಷ್ಟ್ರೀಯ ಕನ್ನಡದ ದಿನಪತ್ರಿಕೆಗೆ ಪ್ರಕಟಿಸಲು ಅರ್ಹವಾಗಿದ್ದರೂ ನಮ್ಮ ಪತ್ರಿಕೆಯ ಮೇಲಿನ ಅಭಿಮಾನದಿಂದ ನಮಗೆ ಕಳುಹಿಸಿ ಔದಾರ್ಯ ಮೆರೆದವರು. ಇಂತಹ ಧೀಮಂತ ವ್ಯಕ್ತಿಯ ಸಹಕಾರಗಳಿಗೆ ಹೃದಯಪೂರ್ವಕವಾಗಿ ನಮಿಸುತ್ತಾ ಮುಂದೆಯೂ ಇವರ ಸಹಕಾರವನ್ನು ಬಯಸುತ್ತದೆ 'ಜ್ಞಾನಶಕ್ತಿ' ಬಳಗ.

## ಮಠದಬೆಟ್ಟು ಇಷ್ಟಿಕಾನ್ಯಾಸ ಮತ್ತು ಗರ್ಭನ್ಯಾಸ



ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ನೂತನ ಶಿಲಾಮಯ ಗರ್ಭಗುಡಿಯ ಇಷ್ಟಿಕಾನ್ಯಾಸ ಮತ್ತು ಗರ್ಭನ್ಯಾಸ ಕಾರ್ಯಕ್ರಮವು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಪೂರ್ಣ ಅನುಗ್ರಹದೊಂದಿಗೆ ಪಾವಂಜೆ ಬ್ರಹ್ಮಶ್ರೀ ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ದಿನಾಂಕ 13-11-2013ನೇ ಬುಧವಾರ ರಾತ್ರಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು, ಜೀರ್ಣೋದ್ಧಾರ ಸಮಿತಿ ಸದಸ್ಯರು, ಸಮಾಜಬಾಂಧವರು, ಹಾಗೂ ಊರಿನ ಭಕ್ತಾಭಿಮಾನಿಗಳು ಉಪಸ್ಥಿತರಿದ್ದರು.


*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

Near Vijaya Pen Mart
Hampankatta, Mangalore - 1




## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...




ಪುತ್ತೂರು ನಗರದ ಹಿರಿಯ ವರ್ತಕ ಹಾಗೂ ಹವ್ಯಾಸಿ ಛಾಯಾಚಿತ್ರಗ್ರಾಹಕ ಶ್ಯಾರ ನಟ್ಟೋಜಿ ರಾಮಕೃಷ್ಣ ರಾವ್ (95) ದಿನಾಂಕ 25-11-2013ರಂದು ರಸ್ತೆ ಅಪಘಾತದಲ್ಲಿ ನಿಧನ ಹೊಂದಿದರು. ಮೃತರು ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಪುತ್ತೂರಿನಲ್ಲಿ ಕಳೆದ ಹಲವು ವರ್ಷಗಳಿಂದ ವಾಹನ ಬಿಡಿಭಾಗಗಳ ಉದ್ಯಮವನ್ನು ನಡೆಸುತ್ತಿದ್ದು ಅವರು ಪುತ್ತೂರು ಶಿವಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ರೋಟರಿ ಕ್ಲಬ್ ಅಧ್ಯಕ್ಷರಾಗಿ ಶ್ರೀ ರಾಮಕೃಷ್ಣ ಸೇವಾ ಸಮಾಜದ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

*****

ಪರ್ಕಳದಲ್ಲಿ ವಾಸ್ತವ್ಯದಲ್ಲಿದ್ದ ಆಲುಗ್ಗೇಲು ರಾಘವೇಂದ್ರ ರಾವ್ (73 ವರ್ಷ)ರವರು ಹೃದಯಾಘಾತದಿಂದ ತಾ. 10-11-2013ರಂದು ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು. ನಿವೃತ್ತ ಪೋಸ್ಟ್ ಮಾಸ್ಟರ್ ಆಗಿದ್ದ ಮೃತರು ಉಡುಪಿ ಹಾಗೂ ಮಣಿಪಾಲ ಅಂಚೆ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು, ಪತ್ನಿ ಶ್ರೀಮತಿ ವಸಂತಿ, ನಾಲ್ವರು ಹೆಣ್ಣು ಮಕ್ಕಳ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.


ಪತ್ರಿಕೆಗೆ ಶುಭ ಬಯಸುವ-



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**



**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028



**ಹೋಮಿಯೋಪತಿ ಹಾಗೂ**
**ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**



**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್
**ಸ್ಪರ್ಶ ಮೆಡಿಕಲ್ ಸೆಂಟರ್**
ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2
ದೂರವಾಣಿ : 0824-4276666 ಮೊಬೈಲ್ : 9844063805



**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893



Prop. : *Kishore Kumar Kedige* Ph. : 2231524
M. : 9880726325



**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*



ಪತ್ರಿಕೆಗೆ ಶುಭ ಬಯಸುವ-

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

## ಶ್ರೀ ಜ್ಞಾನಶಕ್ತಿ ಚಾರಿಟೇಬಲ್ ಟ್ರಸ್ಟ್ (ರಿ.), ಮೈಸೂರು

### ಮನವಿ ಪತ್ರ

ಸನ್ಮಾನ್ಯರೇ,

ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ (ರಿ.) ಮೈಸೂರು, ಇದು 1979ರಲ್ಲಿ ಸ್ಥಾಪಿತವಾಗಿದ್ದು, ಇಲ್ಲಿಯತನಕ ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಂಡಿದೆ.

ತನ್ನ ವೈವಿಧ್ಯಮಯ ಕಾರ್ಯಚಟುವಟಿಕೆಗಳನ್ನು ನಡೆಸಲು ಒಂದು ಸ್ವಂತ, ಸುಸಜ್ಜಿತ ಕಟ್ಟಡದ ಆವಶ್ಯಕತೆಯನ್ನು ಮನಗಂಡು, ಅದಕ್ಕಾಗಿ ಶ್ರೀ ಜ್ಞಾನಶಕ್ತಿ ಚಾರಿಟೇಬಲ್ ಟ್ರಸ್ಟ್ ಎಂಬ ಹೆಸರಿನಲ್ಲಿ ದತ್ತಿಯೊಂದನ್ನು ರಚಿಸಿ, ಅದರ ಮೂಲಕ ತನ್ನ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಲು ಇದೀಗ 'ಶ್ರೀ ಜ್ಞಾನಶಕ್ತಿ ಪ್ರಾರ್ಥನಾ ಮಂದಿರ' ಎಂಬ ಭವನವನ್ನು ನಿರ್ಮಿಸಲು ಯೋಜನೆಯೊಂದನ್ನು ಕೈಗೆತ್ತಿಕೊಂಡಿದೆ.

ಈ ಕಟ್ಟಡದ ನಿರ್ಮಾಣಕ್ಕಾಗಿ ಈ ಎರಡು ನಿವೇಶನಗಳನ್ನು ದಿ. ವೆಂಕಟರಮಣ ಅಧಿಕಾರಿಯವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಭೀಮಾವತಿ ಅಧಿಕಾರಿ ಮತ್ತು ಅವರ ಮಕ್ಕಳು ನಮಗೆ ಉದಾರವಾಗಿ ದಾನದ ರೂಪದಲ್ಲಿ ನೀಡಿರುತ್ತಾರೆ. ಒಟ್ಟು 483.75 ಚ.ಮೀಟರ್ ವಿಸ್ತೀರ್ಣದ ಈ ನಿವೇಶನದಲ್ಲಿ ಈಗ ಸುಮಾರು 1 ಕೋಟಿ 60 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಈ ಪ್ರಾರ್ಥನಾ ಮಂದಿರವನ್ನು ನಿರ್ಮಿಸುವ ಕಾರ್ಯಕ್ಕಾಗಿ ಒಂದು ನಕ್ಷೆಯನ್ನು ಸಿದ್ಧಪಡಿಸಿ, ಅದಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಂಗೀಕಾರ ಪಡೆಯಲಾಗಿದೆ. ಈ ನಮ್ಮ ಕನಸನ್ನು ನನಸಾಗಿಸುವ ಕೈಂಕರ್ಯದಲ್ಲಿ ತಾವೆಲ್ಲರೂ ಭಾಗಿಗಳಾಗಿ ತಮ್ಮ ತನು–ಮನ–ಧನದ ಸಹಕಾರ ನೀಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇವೆ.


ನಿಮ್ಮ ದೇಣಿಗೆಯನ್ನು 'ಶ್ರೀ ಜ್ಞಾನಶಕ್ತಿ ಚಾರಿಟೇಬಲ್ ಟ್ರಸ್ಟ್ (ರಿ.)' ಹೆಸರಿಗೆ ಕ್ರಾಸ್ ಮಾಡಿದ ಚೆಕ್ / ಡ್ರಾಫ್ಟ್ ಅಥವಾ ಉಳಿತಾಯ ಖಾತೆ ಸಂಖ್ಯೆ 109901011001989, ವಿಜಯಾ ಬ್ಯಾಂಕ್, ಜೆ.ಎಲ್.ಬಿ. ರಸ್ತೆ, ಮೈಸೂರು ಇಲ್ಲಿಗೆ ನೇರವಾಗಿ ಜಮಾ ಮಾಡಬಹುದಾಗಿದೆ.

**ಹೆಚ್ಚಿನ ಮಾಹಿತಿಗಾಗಿ**

**ಶ್ರೀ ಕೆ. ಆನಂದ ರಾವ್** 9845046424, **ಶ್ರೀ ಬಿ. ಎನ್. ಶ್ರೀಕೃಷ್ಣ ರಾವ್** 93421 06163
**ಶ್ರೀ ಕೆ. ವಿ. ಗಣೇಶ್ ಅಧಿಕಾರಿ** 94480 69182

**ಟ್ರಸ್ಟಿಗಳು, ಶ್ರೀ ಜ್ಞಾನಶಕ್ತಿ ಚಾರಿಟೇಬಲ್ ಟ್ರಸ್ಟ್ (ರಿ.), ಮೈಸೂರು**

## ಸಮಾಜ ಬಾಂಧವರಲ್ಲಿ ವಿಜ್ಞಾಪನೆ



ಸೀತಾಂಗೋಳಿ ಸಮೀಪ ಪುತ್ತಿಗೆ ಭಂಡಾರದ ಮನೆಯ ಕೃಷ್ಣಯ್ಯ ಪುತ್ತಿಗೆ ಸುಬ್ರಾಯರು ದೇವಸ್ಥಾನದ ಸ್ಥಾನಿಕರಾಗಿದ್ದು ಇವರ ಕುಟುಂಬದ ಸ್ಥಿತಿ ನಿಜಕ್ಕೂ ದಯನೀಯವಾದುದು. ವಿಧವೆಯಾಗಿರುವ ಇವರ ಹಿರಿಯಕ್ಕ ಲೀಲಾವತಿ, ಅಂಗವಿಹೀನಗೊಂಡು ಪೂರ್ಣ ಹಾಸಿಗೆ ಹಿಡಿದಿರುವ ಕಿರಿಯಕ್ಕ ಶಾರದಾ, ಕಾಯಿಲೆ ಪೀಡಿತರಾಗಿರುವ ಪತ್ನಿ. ಈಗ ತಾನೇ 19ರ ಹರೆಯಕ್ಕೆ ಬಂದಿರುವ ಪುತ್ರನು ದೇಲಂಪಾಡಿ ದೇವಸ್ಥಾನದಲ್ಲಿ ಸ್ಥಾನಿಕ ವೃತ್ತಿಯಲ್ಲಿದ್ದಾರೆ. ತೀರಾ ಪುಟ್ಟ ವೇತನವಷ್ಟೇ ಇವರಿಬ್ಬರಿಗೂ ದೊರಕುತ್ತಿದೆ.

ಇವರ ಅಲ್ಪ ಆದಾಯದಿಂದಲೇ ಇಡೀ ಕುಟುಂಬ ನಿರ್ವಹಣೆ, ರೋಗಿ ಮಹಿಳೆಯರ ಶುಶ್ರೂಷೆ ಸಹಿತ ಎಲ್ಲವೂ ನಡೆಯಬೇಕು. ಸದ್ಯ ಪುತ್ತಿಗೆ ಶ್ರೀ ಸುಬ್ರಾಯ ದೇವಸ್ಥಾನದ ಭಂಡಾರದ ಮನೆಯಲ್ಲಿ ವಾಸವಿರುವ ಈ ಬಡಕುಟುಂಬಕ್ಕೆ ಯೋಗ್ಯ ನಿವಾಸದ ಅನಿವಾರ್ಯತೆಯನ್ನು ಅರ್ಥೈಸಿ ಈ ಮಹತ್ ಉದ್ದೇಶಕ್ಕಾಗಿ ಹೃದಯವಂತರು ಸೇರಿ **'ಕೃಷ್ಣಯ್ಯ ಪುತ್ತಿಗೆ ವಸತಿ ಸಮಿತಿ'** ರೂಪಿಸಿ ಕಾರ್ಯಪ್ರವೃತ್ತವಾಗಿದೆ.

ಪುತ್ತಿಗೆಯಲ್ಲಿ ಮಾರಾಟಕ್ಕಿರುವ ಐದು ಸೆಂಟ್ಸ್ ಸ್ಥಳ ಹಾಗೂ ಹಂಚಿನ ಮನೆಯನ್ನು ಈ ಕುಟುಂಬಕ್ಕಾಗಿ ಕಾದಿರಿಸಲಾಗಿದೆ. ಮನೆ, ಸ್ಥಳ ಖರೀದಿ ಹಾಗೂ ದುರಸ್ತಿಗೆ ಸುಮಾರು 8 ಲಕ್ಷ ರೂಪಾಯಿ ವೆಚ್ಚ ತಗಲಿದೆ. ಉದಾರಿಗಳ ಕೊಡುಗೈ ನೆರವನ್ನು ನಿರೀಕ್ಷಿಸುತ್ತಿದ್ದೇವೆ. ಬಡಕುಟುಂಬದ ನೆರವಿಗೆ ಹೃದಯವಂತರು ಶಕ್ತಿ ಮೀರಿದ ಸಹಾಯಹಸ್ತ ನೀಡಬೇಕೆಂದು ವಿನಂತಿಸುತ್ತೇವೆ.

| | |
|---|---|
| **ಪ್ರೊ. ಎ. ಶ್ರೀನಾಥ**<br>ಅಧ್ಯಕ್ಷರು<br>09446064928 | **ಡಿ. ದಾಮೋದರ**<br>ಕೋಶಾಧ್ಯಕ್ಷರು |

ಮತ್ತು **ಸದಸ್ಯರು, ಕೃಷ್ಣಯ್ಯ ಪುತ್ತಿಗೆ ವಸತಿ ಸಮಿತಿ, ಪುತ್ತಿಗೆ, ಅಂಚೆ : ಪುತ್ತಿಗೆ**

***ಸೂಚನೆ : ನೆರವನ್ನು ಮುಗು ಸೇವಾ ಸಹಕಾರಿ ಬ್ಯಾಂಕಿನ ಎಸ್.ಬಿ. ಖಾತೆ ನಂಬ್ರ 1589ಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕವೂ ಕಳುಹಿಸಬಹುದು.***

## ಅಪಾರ ಕೀರ್ತಿ ಗಳಿಸಿ...



ಮಂಗಳೂರು ವಿ.ವಿ. ನಡೆಸಿದ ಪದವಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಕು| ಶ್ರೀವಲ್ಲಿ ಮಡಿಯಾಲ 4ನೇ ರ್‍ಯಾಂಕ್ (ಶೇ. 93.9) ಗಳಿಸಿದ್ದಾಳೆ. ಇವಳು ವಿವೇಕಾನಂದ ಕಾಲೇಜು ಪುತ್ತೂರಿನ ವಿದ್ಯಾರ್ಥಿನಿ, ಶ್ರೀ ಗೋಪಾಲಕೃಷ್ಣ ರಾವ್ ಮಡಿಯಾಲ ಮತ್ತು ಶ್ರೀಮತಿ ವಾಣಿ, ಕಡಬ ಇವರ ಪ್ರಥಮ ಪುತ್ರಿ.

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀಮತಿ ಜಯಶ್ರೀ ಮತ್ತು ಶ್ರೀ ಸುಧಾಕರ ರಾವ್ ಶೆಡ್ಯರವರ ಸುಪುತ್ರ **ಚಿ| ವಿವೇಕ್** ಮತ್ತು ಶ್ರೀಮತಿ ಸಂಧ್ಯಾ ಮತ್ತು ಶ್ರೀ ಶಂಕರನಾರಾಯಣ ರಾವ್ ಕರ್ವಾಲ್ ಇವರ ಸುಪುತ್ರಿ **ಚಿ| ಸೌ| ಸಂಗೀತಾ**ರ ವಿವಾಹವು ದಿನಾಂಕ 29–11–2013ರಂದು ಬೆಂಗಳೂರಿನಲ್ಲಿ ನಡೆಯಿತು.

## ಕಾಯಿವಡೆ

**ಬೇಕಾಗುವ ಸಾಮಾನು :** 1 ಲೋಟ ಅಕ್ಕಿ ಹಿಟ್ಟು, ರುಚಿಗೆ ಉಪ್ಪು, 1 ತಟ್ಟೆ ತೆಂಗಿನ ತುರಿ, 1 ಚಮಚ ಜೀರಿಗೆ, 1 ಹಿಡಿ ಅವಲಕ್ಕಿ, ಎಣ್ಣೆ.

**ಮಾಡುವ ವಿಧಾನ :** ತೆಂಗಿನ ತುರಿ ಉಪ್ಪು ಹಾಕಿ ರುಬ್ಬಬೇಕು. ನಂತರ ಹಿಟ್ಟು, ಜೀರಿಗೆ, ಅವಲಕ್ಕಿ ಈ ಎಲ್ಲವನ್ನು ಚೆನ್ನಾಗಿ ಕಲಸಿ ಉಂಡೆ ಮಾಡಿ ಪ್ಲಾಸ್ಟಿಕ್ ಪೇಪರಲ್ಲಿ ಒತ್ತಿ ಕಾಯ್ದ ಎಣ್ಣೆಗೆ ಹಾಕಿ ಕರಿದಾಗ ದೊಡ್ಡದಾಗಿ ಉಬ್ಬುತ್ತದೆ. ಕರಿದ ಮೇಲೆ ಗರಿ ಗರಿಯಾದ ವಡೆ ರೆಡಿ. ಡಬ್ಬದಲ್ಲಿ ಹಾಕಿಟ್ಟರೆ 15 ದಿನವಾದರೂ ಕೆಡುವುದಿಲ್ಲ ಖರ್ಚು ಕಡಿಮೆ.

***– ವತ್ಸಲಾ ಯೋಗೀಶ್ ರಾವ್ ಏಳಿಂಜೆ***


**SHARMA ENTERPRISES**
KANKANADY, MANGALORE - 575 002
Mob. : 9844187083
Prop. : *Chethan Sharma*


## ವಧೂವರರ ವಿವಾಹ ವೇದಿಕೆ



**ನಮ್ಮ ಸಮಾಜ ಬಾಂಧವರ ಗಮನಕ್ಕೆ -**

ವಧೂವರರ ವಿವಾಹ ವೇದಿಕೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಾರಂಭಿಸಿ, ಇದರ ಉಪಯುಕ್ತತೆಯನ್ನು ನಮ್ಮ ಸಮಾಜ ಬಾಂಧವರು ಪಡೆದುಕೊಂಡಿದ್ದಾರೆ. ಇನ್ನು ಮುಂದೆಯೂ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬಹುದು.

***ಸಂಪರ್ಕಿಸಿರಿ :***

| | |
|---|---|
| ಶ್ರೀ ಚೇತನ್ ಶರ್ಮ | : 9844187083 |
| ಶ್ರೀ ಎನ್. ಶಶಿಕಾಂತ್ ರಾವ್ | : 9341988753 |
| ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ | : 9242204848 |

E-mail : gbicsm@gmail.com


**PREETHIKA AUTOMOBILES**
✆ 2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**


## ಒಂದು ವಿಜ್ಞಾಪನೆ

'ಜ್ಞಾನಶಕ್ತಿ' ಪತ್ರಿಕೆಯನ್ನು ಆರ್ಥಿಕವಾಗಿ ಸುದೃಢಗೊಳಿಸುವ ದೃಷ್ಟಿಯಿಂದ ಸಮಾಜ ಬಾಂಧವರು ಉದಾರ ಧನಸಹಾಯವನ್ನು ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

**ಜಾಹೀರಾತು ದರ**

1) **6 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 600/-**
2) **12 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 1000/-**


Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
***Authorised Dealers for :***
**Vijai Super GP 150 &**
**Vikram 3 Wheelers (Petrol & Diesel)**


# ಓಹೋ... ಹಿಮಾಲಯ

**ಪ್ರವಾಸ ಕಥನ : ಶ್ರೀಮತಿ ಸ್ನೇಹಲತಾ ದಿವಾಕರ್, ಸುರತ್ಕಲ್**




ಅಕ್ಟೋಬರ್ 19ರಂದು ನೋಯಿಡಾದಿಂದ ಬೆಳಗ್ಗೆ ಗಂಟೆ 6-30ಕ್ಕೆ ಹೊರಟು ನಾರಾಯಣ ಗುರು ಅಕ್ಷರಧಾಮ, ಯಮುನಾ (ನದಿ ನೀರಿಲ್ಲ) ಮಯೂರ ವಿಹಾರ, ದೆಹಲಿಯ ಕೆಂಪು ಕೋಟೆಗಾಗಿ ಸೂರ್ಯೋದಯ ನೋಡುತ್ತಾ ಸಾಗಿದೆವು. ಮುಂದೆ ಕುರುಕ್ಷೇತ್ರ, ಅಂಬಾಲಾ ಕೆಂಟೋನ್‌ಮೆಂಟ್ ದಾಟಿದೆವು. ಎಲ್ಲಾ ಕಡೆ ರಸ್ತೆ ಚೆನ್ನಾಗಿತ್ತು. 3-4 ಕಡೆ ಟೋಲ್ ಹಣ ಕೊಡಲಿಕ್ಕಿತ್ತು. ಸುತ್ತಲೂ ಕಬ್ಬು, ಜೋಳ, ಗೋಧಿ ಗದ್ದೆಗಳು ಮತ್ತು ಕೈಗಾರಿಕಾ ಪ್ರದೇಶಗಳು. ಕಾರಿನಲ್ಲೇ ಉಪಾಹಾರ. ಮುಂದೆ ಪಂಚಕುಳ, ಹಿಮಾಲಯನ್ ಎಕ್ಸ್‌ಪ್ರೆಸ್‌ವೇ ಆದ ಬಳಿಕ ಧರ್ಮಪುರಿಯಿಂದ ಸೋಲನ್ ಸಿಟಿಗೆ ಬಂದೆವು. ಇಲ್ಲಿನ ಮಶ್‌ರೂಮ್ ಬೆಳೆ ಭಾರತಕ್ಕೆ ಪ್ರಸಿದ್ಧ, ಟೊಮೆಟೋವನ್ನು ಇಲ್ಲಿ ತುಂಬಾ ಬೆಳೆಯುತ್ತಾರೆ. ದಾರಿ ಬದಿಯ ಸುಂದರ ಜಾಗದಲ್ಲಿ ಮಂಗಗಳಿಂದ ರಕ್ಷಿಸಿಕೊಂಡು ಮನೆಯಿಂದ ತಂದ ಭೋಜನವನ್ನು ಮುಗಿಸಿದೆವು. ಮುಂದೆ ಮೇಲೇರುತ್ತಾ ಕಣಿವೆ, ಬೆಟ್ಟ ದಾಟಿ ಸಂಕಟಮೋಚನ್ ಮಂದಿರವಿರುವ ಸ್ಥಳವನ್ನು ತಲುಪಿದೆವು. ಅಲ್ಲಿ ಹನುಮಂತ, ಗಣಪತಿ, ಶಿವ, ಶನಿ ದೇವರುಗಳ ಮಂದಿರಗಳಿವೆ. ಸುತ್ತಲೂ ತಿರುಗಲು ವಿಶಾಲವಾದ ನಿರ್ಮಲವಾದ ಜಾಗವಿದೆ. ಪೂಜೆ, ಪ್ರಸಾದಗಳನ್ನು ಸ್ವೀಕರಿಸಿದೆವು. ಸಿಮ್ಲಾ ದಾಟಿ ಮಶೋಬರಾದಲ್ಲಿರುವ ಕ್ಲಬ್ ಮಹೇಂದ್ರಾ ಹೋಟೆಲ್‌ನ್ನು ತಲುಪಿದೆವು. ತುಂಬಾ ತಿರುವುಗಳಿರುವ ಅಗಲ ಕಿರಿದಾದ ಸುಂದರ ಮಾರ್ಗಗಳು. ಕುಳಿರ್ಗಾಳಿ ಬೀಸುತ್ತಿತ್ತು. ಸುಮಾರು 400 ಕಿ.ಮೀ. ಪ್ರಯಾಣದ ನಂತರ ಸಮುದ್ರ ತಳದಿಂದ 2400 ಮೀ. ಎತ್ತರದ ಪರ್ವತ ಪ್ರದೇಶಕ್ಕೆ ಬಂದಿದ್ದೆವು. ಬಿಸಿನೀರಿನ ಸ್ನಾನದೊಂದಿಗೆ, ರಾತ್ರಿ ವಿಶ್ರಮಿಸಿದೆವು.



ಸಿಮ್ಲಾ ಸುತ್ತಲೂ ಬೇರೆ ಬೇರೆ ತಳ ಮಟ್ಟದಲ್ಲಿ ತುಂಬಾ ಮನೆಗಳನ್ನು ಕಟ್ಟಿದ್ದಾರೆ. ತಿರುವುಗಳಲ್ಲೂ ಕಾರುಗಳನ್ನು ವೇಗವಾಗಿ ಓಡಿಸುತ್ತಾರೆ. ಕಾರನ್ನು ಪೇಟೆಯಲ್ಲಿ ಎಲ್ಲೂ ನಿಲುಗಡೆ ಮಾಡುವಂತಿಲ್ಲ. ದೂರದಲ್ಲಿ ಪಾರ್ಕಿಂಗ್ ಏರ್ಪಾಟಾಗಳಿವೆ. ಅಲ್ಲಿ ನಿಬಿಢವಾಗಿ ಕಾರುಗಳನ್ನು ನಿಲುಗಡೆ ಮಾಡುತ್ತಾರೆ. ಹೇಗೆ ಇಡುತ್ತಾರೋ? ಹೇಗೆ ತೆಗೆಯುತ್ತಾರೋ? ಗಾಬರಿಯಾಗುತ್ತದೆ.

ಮರುದಿನ ಬೆಳಗ್ಗೆ ಬೆಚ್ಚನೆ ತೊಡುಗೆ ಧರಿಸಿ ಸಿಮ್ಲಾ ನೋಡಲು ಹೊರಟೆವು. ಆಕಾಶವಾಣಿ ದಾಟಿ ಒಂದು ಬೆಟ್ಟದ ಮೇಲೆ ವೈಸರಾಯ್ ಭವನಕ್ಕೆ ಬಂದೆವು. ಕಾರು ನಿಲ್ಲಿಸಿ ಅರ್ಧ ಮೈಲಿ ತಿರುವಿನಲ್ಲೇ ನಡೆದರೆ ಭಾರತದ ತ್ರಿವರ್ಣ ಧ್ವಜ ಹಾರುವ ಸುಂದರವಾದ ಕಲ್ಲಿನಿಂದ ಕಟ್ಟಿದ ವಿಶಾಲವಾದ ಎರಡಂತಸ್ತಿನ ಬಂಗಲೆ ಕಾಣುತ್ತದೆ. 1878ರಲ್ಲಿ ಇದನ್ನು ಕಟ್ಟಿದ್ದಾರೆ. ಇದರಲ್ಲಿ ಈಗ ಪೋಸ್ಟ್ ಡಾಕ್ಟರ್, ಎಡ್ವಾನ್ಸ್‌ಡ್ ಸ್ಟಡಿ ಮಾಡಲು ಅನುಕೂಲ ಕಲ್ಪಿಸಿದ್ದಾರೆ. ವಸತಿ, ಲೈಬ್ರೆರಿ, ಸ್ಕಾಲರ್‌ಶಿಪ್ ಕೂಡಾ ಇದೆ. ಇವೆಲ್ಲಾ ಮೇಲಿನ ಅಂತಸ್ತುಗಳಲ್ಲಿವೆ. ಇಲ್ಲಿ ಸಂದರ್ಶಕರಿಗೆ ಪ್ರವೇಶವಿಲ್ಲ. ಕೆಳಗಿನ ಸುಂದರವಾದ ಹಾಲ್‌ಗಳು, ಕೋಣೆಗಳನ್ನು ನಾವು ನೋಡಬಹುದು. ಒಳಗೆ ಹೋದ ಕೂಡಲೇ ಎದುರಿಗೆ ಪ್ರಥಮ ಭಾರತದ ಮಾಜಿ ರಾಷ್ಟ್ರಾಧ್ಯಕ್ಷ ಡಾ। ಸರ್ವಪಲ್ಲಿ ರಾಧಾಕೃಷ್ಣನ್ ಅವರ ಆಳೆತ್ತರ ಫೋಟೊ ಇದೆ. ಇಡೀ ಭವನ 125 ವರ್ಷ ಹಳೆಯದು. ಟೀಕ್ ಮರದಿಂದ ಒಳಗೆಲ್ಲಾ ಅಲಂಕರಿಸಲಾಗಿದೆ. ಮರದ ಕುರ್ಚಿ ಮೇಜುಗಳು. ಇಲ್ಲಿ ಸುಂದರವಾಗಿ ಕಾಶ್ಮೀರಿ ಮರದ ಸೀಲಿಂಗ್‌ಗಳು (ಬಿದಿರಿನಿಂದ ಮಾಡಿದ ಕೀಲಿಬೆಣೆಗಳಂತೆ) ಒಂದು ಕೋಣೆಯಲ್ಲಿ ಉರುಟು ಮೇಜು, ಅದರಲ್ಲಿ ಮಹಾತ್ಮಾ ಗಾಂಧಿಯವರು ಸಿಮ್ಲಾ ಕಾನ್ಫರೆನ್ಸ್‌ನಲ್ಲಿ ಭಾರತ–ಪಾಕ್ ವಿಭಜನೆಗೆ ಸಹಿ ಮಾಡಿದ್ದರಂತೆ. ಪಕ್ಕದಲ್ಲಿ ಬಿಲಿಯರ್ಡ್ಸ್ ಆಡುತ್ತಿದ್ದ ಕೋಣೆ. ಗೋಡೆಗಳಲ್ಲೆಲ್ಲಾ ಹಳೆಯ ಕಾಲದ ಗಾಂಧೀ, ನೆಹರು, ಇಂದಿರಾ ಗಾಂಧೀ, ಸರೋಜಿನೀ ನಾಯ್ಡು ಸಾರೋಟು ಕುದುರೆಯಲ್ಲಿ ಕುಳಿತಿರುವ ಮತ್ತು ಆಂಗ್ಲ ರಾಜ, ರಾಣಿ ಕಪ್ಪುಬಿಳುಪಿನ ಫೋಟೋಗಳು ಚೆನ್ನಾಗಿ ಜೋಡಿಸಿದ್ದಾರೆ. ಭವನದ ಸುತ್ತಲೂ ವಿಶಾಲವಾದ ಹೂತೋಟಗಳಿವೆ. ವೀಕ್ಷಿಸಲು ವ್ಯೂ ಪಾಯಿಂಟ್‌ಗಳಿವೆ. ಮೇಲಿನ ಸಿಮ್ಲಾ ಪರ್ವತದಿಂದ ಹರಿಯುವ ನೀರು ಎರಡು ಕವಲಾಗಿ ಒಂದು ಐದು ನದಿಗಳಾಗಿ ಪಂಜಾಬ್‌ಗೆ ಹರಿಯುತ್ತದಂತೆ. ಮತ್ತೊಂದರಿಂದ ಗಂಗಾ, ಯಮುನ, ಗೋದಾವರಿ, ಕಾವೇರಿ ಮುಂತಾದ ನದಿಗಳಾಗುತ್ತವಂತೆ, ಹಿಮಾಚಲದ ಸುತ್ತಲಿನ ಭೂಮಿಗೆ ದೇವಿಯ ಭೂಮಿ ಎನ್ನುತ್ತಾರೆ. ಶ್ಯಾಮಲಾದೇವಿ ಇಲ್ಲಿಯ ದೇವಿ. ಆಂಗ್ಲರ ಬಾಯಿಯಲ್ಲಿ ಇದು ಶಿಮ್ಲಾ ಹೋಗಿ ಸಿಮ್ಲಾ ಆಗಿದೆ. ಎಲ್ಲಿ ನೋಡಿದರೆ ತಿರುವಿನಲ್ಲಿ ಮೇಲೇರಿದರೆ ಒಂದು ಪತಾಕೆ, ಚಿಕ್ಕ ಸುಂದರ ಮಂದಿರ. ಪ್ರಕೃತಿ ಎಂದರೆ ಅಮ್ಮನವರ ಸನ್ನಿಧಿಯಲ್ಲದೆ ಮತ್ತೇನು?

ಇಲ್ಲೆಲ್ಲಾ ಸುತ್ತಿ ಮುಂದೆ 'ಸಿಮ್ಲಾ ಮೋಲ್'ಗೆ ಬಂದೆವು. ಕಾರ್ ಪಾರ್ಕ್ ಮಾಡಿ ಮೊದಲು ಒಂದು ಲಿಫ್ಟ್‌ನಲ್ಲಿ ಮೇಲೇರಬೇಕು. ಅನಂತರ ಹೊರಗೆ ಬಂದು ತಿರುವಿನಲ್ಲಿ ನಡೆಯಬೇಕು. ಆಮೇಲೆ ಇನ್ನೊಂದು ಲಿಫ್ಟ್‌ನಲ್ಲಿ ಮೇಲೇರಿ ದಾರಿಯಲ್ಲಿ ತಿರುವಿನಲ್ಲಿ ನಡೆದರೆ ಒಂದು ಬದಿಯಲ್ಲಿ



ಮೋಲ್ ತರಹದ ಸಾಲು ಸಾಲು ಅಂಗಡಿಗಳು ಮುಂದೆ ಮೇಲೇರಿದರೆ ವಿಶಾಲವಾದ ಸಮತಟ್ಟು ಮೈದಾನ. ಒಂದು ಬದಿ ಹೆರಿಟೇಜ್ ಮನೆಗಳು, ಬದಿಯಲ್ಲೇ ಪಾರ್ಕ್, ಕುದುರೆ ಸವಾರಿ, ವಿವಿಧ ಆಟಗಳು, ವ್ಯಾಪಾರ. ಸ್ಟೇಡಿಯಂ ರೀತಿಯ ಗ್ಯಾಲರಿಗಳು, ಬೆಂಚುಗಳು (ಮೈದಾನದಲ್ಲಿ ನಡೆಯುವ ಆಟಗಳನ್ನು ವೀಕ್ಷಿಸಲು) ಅಲ್ಲಲ್ಲಿ, ಇಂದಿರಾ ಗಾಂಧಿ, ಗಾಂಧಿ, ಝಾನ್ಸಿರಾಣಿ, ಪುತ್ತಳಿಗಳು. ಮತ್ತೊಂದು ಕಡೆ 1857ರಲ್ಲಿ ಕಟ್ಟಿದ ಹಳೇ ದೊಡ್ಡ ಚರ್ಚ್. ಮತ್ತೊಂದೆಡೆ ಲಕ್ಕಡ್ ಬಸಾರ್‌ಗೆ ಹೋಗುವ ಮಾರ್ಗ. ಅಲ್ಲಿಂದ ಮೇಲೇರಿದರೆ ಪ್ರಸಿದ್ಧವಾದ ಜಾಕೂ ಹನುಮಾನ್ ಮಂದಿರಕ್ಕೆ ಹೋಗುವ ಕಡಿದಾದ ಮಾರ್ಗ ಇದೆ. ಅಗಲ ಕಿರಿದಾದ ರಸ್ತೆಯಲ್ಲಿ ರೂ. 300 ಕೊಟ್ಟರೆ ವೇಗವಾಗಿ ಹೋಗುವ ಟ್ಯಾಕ್ಸಿಯೂ ಇದೆ. ಮೇಲೇರಿದರೆ ಗೋಮಟನಂತೆ ಎತ್ತರವಾದ ಕೇಸರಿ ಬಣ್ಣದ ಹನುಮಾನ್ ವಿಗ್ರಹವಿದೆ. ಕುತ್ತಿಗೆ ಎರಿಸಿದರೂ ಸರಿಯಾಗಿ ಮುಖ ಕಾಣುವುದಿಲ್ಲ. ಲಕ್ಷ್ಮಣ ಮೂರ್ಛೆ ಹೋದಾಗ ಶ್ರೀ ರಾಮನಾಜ್ಞೆಯಂತೆ ಸಂಜೀವಿನಿ ಪರ್ವತ ತರುವಾಗ ಇಲ್ಲಿ ಹನುವಂತ ಕಾಲೂರಿದನಂತೆ. ಸುತ್ತಲೂ ಸಣ್ಣಪುಟ್ಟ ಮಂದಿರಗಳಿವೆ. ಇಡೀ ಸಿಮ್ಲಾದ ಪ್ರಕೃತಿ ಸೌಂದರ್ಯವೂ ಇದೆ. ಆದರೆ ಬಹಳಷ್ಟು ಮಂಗಗಳ ಉಪಟಳವಿದೆ. ಕೆಳಗಿಳಿದು ಬಂದು ಹಿಮಾಚಲಪ್ರದೇಶ ಟೂರಿಸಂನವರ ಆಶಿಯಾನಾ ಹೋಟೇಲ್‌ನಲ್ಲಿ ರುಚಿ ಶುಚಿಯಾದ ರೋಟಿ, ಚಪಾತಿ, ಪಲ್ಯಗಳ ಊಟ ಮಾಡಿದೆವು. ಹಿಂದೆ ಬರುವಾಗ ಸಿಮ್ಲಾ ಪೇಟೆಯ ಸಂಜೋಲಿ ಮಾರ್ಕೆಟ್‌ನಲ್ಲಿ ಎಲ್ಲಾ ಕಡೆ ತುಂಬಾ ನಿಬಿಢ ಜನಸಂದಣಿ, ದಾರಿಬದಿಯಲ್ಲಿ ಮೆಹಂದಿ ಹಾಕುತ್ತಿದ್ದರು. ಆ ದಿನ ಕರುವಾ ಚೌತ್ ಹಬ್ಬ. ಮಾರ್ಗ ಬದಿಯಲ್ಲಿ ಬರೇ ಹೆಂಗಸರ ವ್ಯಾಪಾರ. ನಿಧಾನದಲ್ಲೇ ಹೋಟೇಲ್ ತಲುಪಿದೆವು. ಅಲ್ಲಿಯೇ ಸುತ್ತಮುತ್ತಲು ತಿರುಗಿ ಬೇಗ ಊಟ ಮಾಡಿ ಮಲಗಿದೆವು. ಬೆಳಗ್ಗೆ ಬೇಗ ಎದ್ದು ಸ್ನಾನ, ಉಪಾಹಾರ ಮುಗಿಸಿ ಸೂರ್ಯೋದಯ ನೋಡುತ್ತಾ ಸೋಲನ್ ಸಿಟಿಗೆ ಬಂದು ಅಲ್ಲಿಯ ಹಳದಿ ಏಪಲ್, ಕನ್ನೂರ್, ಸಿಮ್ಲಾ ಏಪಲ್ ಖರೀದಿಸಿ ಬೆಟ್ಟ ಇಳಿಯುತ್ತಾ, ಪಿಂಜೋರ ಪಾರ್ಕ್ ದಾಟಿ ಪಂಚಕುಳ (ಚಂಡೀಘಡದ ಬಳಿ) ಆಗಿ ದಾರಿಯ ಹೋಟೇಲ್‌ನಲ್ಲಿ ಊಟ ಮಾಡಿದೆವು. ಹರಿಯಾಣದಲ್ಲಿ ಹೆಚ್ಚು ಝಾಟ್‌ಗಳು ಇರುತ್ತಾರೆ. ಇದು ಕೃಷಿ, ಹಾಲಿನ ಡೈರಿ, ಕುಸ್ತಿಗೆ ಹೆಸರುವಾಸಿ. ಆಮೇಲೆ ದೆಹಲಿಗಾಗಿ, ಉತ್ತರಪ್ರದೇಶದ ನೋಯಿಡಾದಲ್ಲಿರುವ ಮಗಳ ಮನೆಗೆ ವಾಪಾಸ್ ಬಂದೆವು.

**ತರಾತುರಿಯ ಸುಂದರ ಸಿಮ್ಲಾ ಪ್ರವಾಸ**
**ಒಂದು ರೋಮಾಂಚಕ ಸುಂದರ ಅನುಭವ**

## ಶ್ರೀಮತಿ ಅನ್ನಪೂರ್ಣ ರಾಘವೇಂದ್ರ ರಾವ್‌ರಿಗೆ ಡಾಕ್ಟರೇಟ್

ಶ್ರೀಮತಿ ಅನ್ನಪೂರ್ಣ ರಾಘವೇಂದ್ರ ರಾವ್ ಅವರು ಧಾರವಾಡ ಕೇಂದ್ರದಿಂದ **'ಶರದ್ ಸಿಂಗ್ ಕಿ ಕಥಾ ಸಾಹಿತ್ಯ ಮೆ ಮಾನವೀಯ ಮೌಲ್ಯೋ ಕಿ ಖೋಜ್'** ಎನ್ನುವ ವಿಷಯದಲ್ಲಿ ಉಡುಪಿ ಪೂರ್ಣಪ್ರಜ್ಞಾ ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಡಾ। ಮಾಧವಿ ಎಸ್. ಭಂಡಾರಿ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಪ್ರಬಂಧಕ್ಕೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಚೆನ್ನೈಯವರು ಡಾಕ್ಟರೇಟ್ ಪದವಿ ಪ್ರದಾನಿಸಿದ್ದಾರೆ.

ಶ್ರೀಮತಿ ಅನ್ನಪೂರ್ಣರವರು ಗುಂಡಿಬೈಲು ಶ್ರೀ ಯು. ಪಿ. ರಾಘವೇಂದ್ರ ರಾವ್ ಅವರ ಪತ್ನಿ. ಪ್ರಸ್ತುತ ಉಡುಪಿಯ ಮಹೇಶ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿಯಾಗಿರುವ ಇವರು, ಈ ಹಿಂದೆ ಕಾರ್ಕಳದ ಎಸ್.ವಿ.ಟಿ. ಕಾಲೇಜು ಹಾಗೂ ಮೂಡಬಿದಿರೆಯ ಮಹಾವೀರ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿರುತ್ತಾರೆ. (ಕೃಪೆ : 'ಸುಲಗ್ನ', ಮಾಸಪತ್ರಿಕೆ)



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ಯಶಸ್ವಿ 3ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸ ಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದರವನ್ನು ನಿಗದಿಪಡಿಸಲಾಗಿದೆ.



| | | | |
|---|---|---|---|
| ಮಹಾ ಪೋಷಕರು | – | ರೂ. | 10,000/- |
| ಪೋಷಕರು | – | ರೂ. | 5,000/- |
| ಆಜೀವ ಚಂದಾ ದರ | – | ರೂ. | 500/- |




## ಜ್ಞಾನ – ನುಡಿ

ಯಾರಿಗಾದರೂ ಹೇಳುವಾಗ ನಾವೆಷ್ಟು ಹೇಳಿದೆವು ಎನ್ನುವುದು ಮುಖ್ಯವಲ್ಲ,
ಅವರೆಷ್ಟು ಕೇಳಿಸಿಕೊಂಡರು ಎಂಬುದು ಮುಖ್ಯ.
ಹೇಳಿದ್ದು ಕಿವಿಗಲ್ಲ ಮನಸ್ಸಿಗೆ ಕೇಳುವಂತಿರಬೇಕು. – **ಅಜ್ಞಾತ**

## ಜ್ಞಾನ – ನಗೆ

**ಗುಂಡ** : ನಾನು ನಿನ್ನನ್ನು ಪ್ರೀತಿಸುತ್ತೇನೆ.

**ಹುಡುಗಿ** : ಏನಂದೆ!
ನಾನು ಇದೇ ಮಾತನ್ನು ಪ್ರಿನ್ಸಿಪಾಲ್‌ರಿಗೆ ಹೇಳುತ್ತೇನೆ.

**ಗುಂಡ** : ಏನೂ ಪ್ರಯೋಜನವಾಗೋಲ್ಲ. ಅವರಿಗೆ ಈಗಾಲೇ ಮದುವೆಯಾಗಿದೆ.

## ಜ್ಞಾನ – ಗಾದೆ

ಎರು ಕಟ್ಟ್‌ನ ಬಳ್ಳ್‌ಟ್ ಪೂ ಕಟ್ಟೊಳಿಯಾ?
ಎರುತ ಬೇನೆ ಕಕ್ಕೆಗ್ ಎಂಚ ಗೊತ್ತಾಪುನೆ
ಎರು ಮಾರಿನಾಯಗ್ ಬಲ್ಲ್‌ತ ಮಿತ್ತ್ ಜಾಯೆ ಆಸೆ?

## ಜ್ಞಾನ – ವಿಸ್ಮಯ

ಕ್ಯಾಲಿಫೋರ್ನಿಯಾ ಕಾಲೇಜೊಂದರಲ್ಲಿ ತುರ್ತುಪರಿಸ್ಥಿತಿ ಸಂದರ್ಭವನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾಗಲೇ ಅಂತಹ ಘಟನೆಯೊಂದನ್ನು ನಿಭಾಯಿಸಬೇಕಾದ ಪರಿಸ್ಥಿತಿ ತಲೆದೋರಿತು. ವಿದ್ಯಾರ್ಥಿನಿಯೊಬ್ಬಳು ಆವರಣದಲ್ಲಿ ಬೆಂಚ್ ಮೇಲೆ ಮಗುವಿಗೆ ಜನ್ಮ ನೀಡಿದಾಗ ಉಳಿದ ವಿದ್ಯಾರ್ಥಿನಿಯರು ಹೆರಿಗೆಯಾಗಲು ನೆರವು ನೀಡಿದರಂತೆ!

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*